ಶ್ರೀ ಸಿ. ಎನ್. ಪಾಟೀಲ್. —ಕುರುಕ್ಷೇತ್ರದಲ್ಲಿ ಅಭಿಮನ್ಯುವಿನ ಪಾರ್ಟ್ ಮಾಡಿದ ಹಾಗೆ ಮಾಡಿದರೆ ಹೇಗೆ ? ಫಾರೆಸ್ಟ್ ಪ್ರಿನ್ಸಿಪಲ್ಸ್ ಪ್ರಕಾರ ಕಾಡನ್ನುಳ್ಳಂಥ ಪ್ರದೇಶಗಳಲ್ಲಿ ಹಳೇ ಮರಗಳನ್ನು ಕಡಿದುಹಾಕಲೇಬೇಕು. ಹುಟ್ಟಿದ ಮನುಷ್ಯನಿಗೆ ಸಾವು ಹೇಗೋ ಹಾಗೆ ಇವಕ್ಕೂ ಅಂತಹ ಒಂದು ಹಂತವಿದೆ. ಆದ್ದರಿಂದ ಫಾರೆಸ್ಟ್ ಪ್ರಿನ್ಸಿಪಲ್ಸ್ ಪ್ರಕಾರ ಅಲ್ಲಿ ಅಂತಹ ಮರಗಳನ್ನು ಕಡಿಯಲೇ ಬೇಕಾಗುತ್ತದೆ.

SRI KAGODU THIMMAPPA.—We have no objection to remove the old species or the matured species.

ಶ್ರೀ ಸಿ. ಎನ್. ಪಾಟೀಲ್.—ಅಂತಹ ಸ್ಪೀಸೀಸ್ ನಮ್ಮಲ್ಲಿ ಅನೇಕ ವರ್ಷಗಳಿಂದಲೂ ಇವೆ. ಅವುಗಳಲ್ಲಿ ಒಂದನ್ನೂ ನಶ ಮುಟ್ಟಬೇಡಿ ಎಂದು ಹೇಳಿದರೆ ಹೇಗೆ ? ರೂಲ್ಸ್ ಪ್ರಕಾರ ಕಾಡುಗಳಲ್ಲಿರತಕ್ಕ ಇಂತಿಂಥ ಮರಗಳನ್ನು ಕಡಿಯಬೇಕೆಂದಿರುವಾಗ, ಅವರಂತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

MR. DEPUTY SPEAKER.—The question is :

"That the Karnataka Forest (Amendment) Bill, 1976, be ta en into consideration."

The motion was adopted.

CLAUSES 2 AND 3

MR. DEPUTY SPEAKER.—As there are no amendments I will put to the vote of the house. The question is

"That Clauses 2 and 3 both inclusive. do stand part of the bill"

The motion was adopted

Clauses 2 and 3 both inclusive were added to the Bill

CLAUSE 1 ETC

MR. DEPUTY SPEAKER.— The question is

"That clause 1, the long title and the preamble and the enacting formula do stand part of the bill.

The motion was adopted

Clause 1 of the title and preamble and the enacting formula were added to the bill

Motion to Pass

SRI C. N. PATIL —Sir, I beg to move :

"That the Karnataka Forest (Amendment) Bill, 1976 be passed."

MR. DEPUTY SPEAKER.—The question is :

"That the Karnataka Forest (Amendment) Bill 1975 be passed."

The motion was adopted and the bill was passed

THE KARNATAKA LAND REFORMS (AMENDMENT) BILL, 1976

Motion to Consider

SRI N HUTCHMASTHY GOWDA.—Sir. I beg to move

"That the Karnataka Land Reforms (Amendment) Bill 1976 be taken in to consideration"

MR. DEPUTY SPEAKER.—Motion moved :

"That the Karnataka Land Reforms (Amendment) Bill, 1976 be taken into consideration."

† ಶ್ರೀ ಎನ್. ಹುಚ್ಚಮಾಸ್ತಿಗೌಡ :— ಮಾನ್ಯ ಅಧ್ಯಕ್ಷರೇ, ಈ ಭೂ ಸುಧಾರಣಾ ಕಾಯಿದೆ ಜಾರಿಗೆ ಬಂದ ಮೇಲೆ ನಮ್ಮ ಅನುಭವದಿಂದ ಹೇಳುವುದಾದರೆ ಇವರ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತಿಲ್ಲ ಎನ್ನುವ ದೃಷ್ಟಿಯಿಂದ ಕೆಲವು ತಿದ್ದುಪಡಿಗಳನ್ನು ಅನಿವಾರ್ಯವಾಗಿ ಶಾಸನಸಭೆ ಆಗ ಅಧಿವೇಶನ ಇಲ್ಲದೇ ಇದ್ದುದರಿಂದ ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿದ್ದೇವೆ. ಅದರಲ್ಲಿರತಕ್ಕಂಥ ಮುಖ್ಯ ವಾದಂಥ ಅಂಶಗಳನ್ನು ಸಭೆಯ ಮುಂದಿಡಲಿಕ್ಕೆ ಇಚ್ಛೆಪಡುತ್ತೇನೆ.

ಮೊದಲನೆಯದಾಗಿ, ಕೆಲವು ತಾಲ್ಲೂಕುಗಳಲ್ಲಿ 15,20 ಸಾವಿರಕ್ಕಿಂತಲೂ ಹೆಚ್ಚಾಗಿ ಗೇಣಿದಾರರಿಂದ ಅರ್ಜಿಗಳು ಬಂದಿವೆ. ಗೇಣಿದಾರರಿಂದ ಬಂದಿರತಕ್ಕಂಥ ಅರ್ಜಿಗಳೇ ಆಗಲಿ ಮತ್ತೆ ಹೆಚ್ಚುವರಿ ಭೂಮಿ ಹೊಂದತಕ್ಕಂಥವರ ವಿಷಯದಲ್ಲೇ ಆಗಲಿ ಕಾನೂನಿನ ಮುಖ್ಯ ಉದ್ದೇಶವೇನಿದೆಯೆಂದರೆ ಅದನ್ನು ಈ ವರ್ಷ ಡಿಸೆಂಬರ್ ಆಕ್ಕೆರ್ ಒಳಗಾಗಿ ಪೂರ್ಣ ಮಾಡಬೇಕಿದ್ದೇವೆ. ಆ ದೃಷ್ಟಿಯಿಂದ ಯಾವುದಾವ ತಾಲ್ಲೂಕಿನಲ್ಲಿ ಹೆಚ್ಚು ಗೇಣಿದಾರರಿಂದ ಅರ್ಜಿಗಳು ಬಂದಿವೆ ಅಂಥಕಡೆ ಈಗಿರತಕ್ಕಂಥ ಟ್ರಿಬ್ಯುನಲ್ ಜೊತೆಗೆ ಇನ್ನು ಹೆಚ್ಚು ಟ್ರಿಬ್ಯೂನಲ್‌ಗಳನ್ನು ಹೆಚ್ಚು ಮಾಡಬೇಕಾದಂಥ ಅವಶ್ಯಕತೆಗಳು ಕಂಡು ಬಂದುದರಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಹೆಚ್ಚಿಗೆ ಭೂ ನ್ಯಾಯ ಮಂಡಲಿಗಳನ್ನು ಮಾಡಬೇಕು ಎನ್ನತಕ್ಕಂಥ ದೃಷ್ಟಿಯನ್ನಿಟ್ಟುಕೊಂಡು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಭೂ ನ್ಯಾಯ ಮಂಡಲಿಗಳಲ್ಲಿ ಲೆಜಿಸ್ಲೇಟರ್ಸ್ ಇರಬೇಕು ಎನ್ನತಕ್ಕಂಥದೊಂದು ಅಂಶ ಈಗಿರತಕ್ಕಂಥ ಕಾನೂನಿನ ಪ್ರಕಾರವಿದೆ. ಒಂದೊಂದು ಕಡೆಯೂ ಹೆಚ್ಚು ಭೂ ನ್ಯಾಯ ಮಂಡಲಿಗಳನ್ನು ರಚನೆ ಮಾಡಿದರೆ ಎಲ್ಲಾ ನ್ಯಾಯಮಂಡಲಿಗಳಲ್ಲೂ ಕೂಡ ಶಾಸಕರನ್ನು ನೇಮಿಸುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಆ ನ್ನು ಸಡಿಲಗೊಳಿಸಿ ಆ ನ್ಯಾಯ ಮಂಡಲಿಗಳನ್ನು ರಚನೆ ಮಾಡುವದಕ್ಕೋಸ್ಕರ ಮತ್ತೊಂದು ತಿದ್ದುಪಡಿ ಅವಶ್ಯಕವೆಂದು ಗೊತ್ತುಮಾಡಿ ಆ ಒಂದು ತಿದ್ದುಪಡಿಯನ್ನೂ ಕೂಡ ತಂದಿದ್ದೇವೆ.

ಇನ್ನು ಗೇಣಿದಾರರಿಗೆ ಅರ್ಜಿ ಹಾಕುವುದಕ್ಕೆ ಒಂದು ವಾಯಿದೆಯನ್ನು ಗೊತ್ತು ಮಾಡಿದ್ದೆವು. ಅದು ಕಳೆದ ಡಿಸೆಂಬರ್ 31 ನೇ ತಾರೀಖಿನವರೆಗೂ ಇತ್ತು. ಆ ರೀತಿ ಹಿಂದೆ ಕೊಟ್ಟಂಥ ವಾಯಿದೆ ಸಾಲದು ಇನ್ನು ಕೆಲವು ಗೇಣಿದಾರರು ಅರ್ಜಿ ಹಾಕದೆ ಉಳಿದಿದ್ದಾರೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದ ಮೇಲೆ ಆ ವಾಯಿದೆಯನ್ನು ಈ ವರ್ಷದ ಜೂನ್ ತಿಂಗಳ ಆಕ್ಕೆರ್‌ವರೆಗೂ ಹೆಚ್ಚು ಮಾಡಿದ್ದೇವೆ. ಇದು ಒಂದು ತಿದ್ದುಪಡಿ ನಾವು ತಂದಿರತಕ್ಕಂಥದ್ದು.

ಆ ಮೇಲೆ ಇನ್ನೊಂದು ತಿದ್ದುಪಡಿ ಏನೆಂದರೆ ಅನೇಕ ಜನ ವಿಧವೆಯವರು, ಸಣ್ಣ ಸಣ್ಣ ಹಿಡುವಳಿದಾರರು, ಅಂಗವಿಕಲಕರು ಇಂಥವರು ಅವರ ಜಮೀನುಗಳನ್ನು ಕಳೆದುಕೊಂಡಾಗ ಆ ಜಮೀನನ್ನು ಗೇಣಿದಾರರಿಗೆ ಕೊಟ್ಟಮೇಲೆ ಅವರಿಗೆ ಕೊಡತಕ್ಕಂಥ ಪರಿಹಾರ ಹಣವನ್ನು ಒಂದೇ ಗಂಟಿನಲ್ಲಿ ಕೊಟ್ಟರೆ ಸಹಾಯವಾಗುತ್ತದೆ. ಅದರಿಂದ ಅವರು ಬೇರೆ ಯಾವುದಾದರೂ ಸಣ್ಣ ಸಣ್ಣ ಉದ್ಯೋಗದಲ್ಲಿ ತೊಡಗಿಸುವುದಕ್ಕೆ ಅನುಕೂಲವಾಗುತ್ತದೆ, ಹಾಗೂ ಬೇರೆ ಜೀವನಕ್ಕೆ ಮಾರ್ಗವನ್ನು ಕಲ್ಪಿಸಿಕೊಟ್ಟಂತೆ ಆಗುತ್ತದೆ ಎಂದು ಹೇಳಿ ಇನ್ನೊಂದು ತಿದ್ದುಪಡಿಯನ್ನು ತಂದಿದ್ದೇವೆ. ಆ ರೀತಿ ಅವರಿಗೆ ನಾವು ಒಂದೇ ಗಂಟಿನಲ್ಲಿ ಹಣವನ್ನು ಕೊಡಬೇಕಾದರೆ ನಮಗೆ ಹಣದ ಸಹಾಯವೂ ಬೇಕಾಗುತ್ತದೆ ಆ ದೃಷ್ಟಿಯಿಂದ ಇನ್ನು ಕೆಲವು ಅದಕ್ಕೆ ಅನುಗುಣವಾದ ತಿದ್ದುಪಡಿಗಳನ್ನು ತಂದಿದ್ದೇವೆ ಆ ತಿದ್ದುಪಡಿ ಏನೆಂದರೆ ಈಗಿರತಕ್ಕಂಥ ಕಾನೂನಿನ ಪ್ರಕಾರ ಗೇಣಿದಾರರು ತಾವು ಭೂಮಿಯನ್ನು ಪಡೆದುಕೊಳ್ಳುವುದಕ್ಕೋಸ್ಕರ ಅಕ್ಯುಪೆನ್ಸಿ ಪ್ರೈಜನ್ನು ಕೊಡಬೇಕಾ

ಗಿದೆ ಆ ಹಣವನ್ನು ಅವರು 20 ವರ್ಷಗಳಲ್ಲಿ ಕಂತುಗಳ ಮುಖಾಂತರ ಕೊಡುವುದಕ್ಕೆ ಅವಕಾಶವಿತ್ತು. ಆದರೆ ಸಣ್ಣ ಹಿಡುವಳಿದಾರರಿಗೆ, ವಿಧವೆಯರಿಗೆ ಇಂಥವರಿಗೆ ಒಂದೇ ಗಂಟಿನಲ್ಲಿ ಹಣ ಕೊಡಬೇಕಾದರೆ ಸರ್ಕಾರದಿಂದ ನೇರವಾಗಿ ಇಷ್ಟು ಹಣವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದುದರಿಂದ ಗೇಣಿದಾರರಂ ತಾವು ಕೊಡಬೇಕಾದಂಥ ಹಣವನ್ನು ಸರ್ಕಾರಕ್ಕೆ ಒಂದೇ ಕಂತಿನಲ್ಲಿ ಕೊಡಬೇಕು ಎಂದು ಇನ್ನೊಂದು ಬದ ಲಾವಣೆ ಮಾಡಿದ್ದೇವೆ. ಆದರೆ ಅವರಲ್ಲಿ ಕೆಲವರು ಹಣವನ್ನು ಕೊಡತಕ್ಕಂಥ ಸಾಮರ್ಥ್ಯವನ್ನು ಹೊಂದಿ ಲ್ಲದೇ ಇರುವವರು ಇರುವುದರಿಂದ, ಅವರಿಗೆ ಅನುಕೂಲವಾಗುವ ದೃಷ್ಟಿಯಿಂದ ನಾವು ಈಗಾಗಲೇ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಮೂಲಕ ಗೇಣಿದಾರರಿಗೆ ಹಣವನ್ನು ಕೊಟ್ಟು ಅವರು ಒಂದೇ ಗಂಟಿನಲ್ಲಿ ಸರ್ಕಾರಕ್ಕೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

ಇನ್ನೊಂದು ತಿದ್ದುಪಡಿ ತಂದಿದ್ದೇವೆ; ಅದು ಏನೆಂದರೆ ಹೆಚ್ಚುವರಿ ಭೂಮಿಂ ಇರತಕ್ಕಂಥವರು ಈ ಶಾಸನ ಬಂದಂಥ ಕಾಲದಲ್ಲಿ ಯಾರಿಗೆ ಎ ವರ್ಗದ ಭೂಮಿ, ಬಿ ಮತ್ತು ಸಿ ವರ್ಗದ ಭೂಮಿ ಮತ್ತು ಡಿ ವರ್ಗದ ಭೂಮಿ ಇತ್ತೋ ಅವರೂ ಸಹ ಡಿಕ್ಲರೇಷನ್ ಮಾಟಿಕೊಡಬೇಕಾಗಿತ್ತು. ನವಂಗೆ ಬಂದಿರತಕ್ಕಂಥ ಕೆಲವು ಉದಾಹರಣೆಗಳ ಪ್ರಕಾರ ಏನಾಗಿದೆಂದರೆ ಕೆಲವರು ಹೆಚ್ಚುವರಿ ಭೂಮಿ ಇರತಕ್ಕಂಥವರು ಕಡಿಮೆ ಬೆಲೆಗೆ ಪರಭಾರೆ ಮಾಡಿ ತಾವು ಡಿಕ್ಲೆರೇಷನ್ ಕೊಡದೇ ತಪ್ಪಿಸಿಕೊಂಡಿರತಕ್ಕಂಥ ಉದಾಹರಣೆಗಳು ನಮ್ಮ ಗಮನಕ್ಕೆ ಬಂದಮೇಲೆ, ಈ ಶಾಸನ ಮೊಟ್ಟಮೊದಲು ಅಂದರೆ 1961ನೇ ಇಸ್ವಿ ನವಂಬರ್ 18ನೇ ತಾರೀಖಿ ನಿಂದ ಜಾರಿಗೆ ಬಂದಮೇಲೆ ಯಾರು ಯಾರು ಭೂಮಿಯನ್ನು ಪರಭಾರೆ ಮಾಡಿದ್ದಾರೆ ಎನ್ನುವುದನ್ನೆಲ್ಲಾ ತಿಳಿಸಬೇಕೂ ಎಂದು ಇನ್ನೊಂದು ಬದಲಾವಣೆ ಮಾಡಿದ್ದೇವೆ. ಇದನ್ನೆಲ್ಲಾ ಸುಗ್ರೀವಾಜ್ಞೆಯಲ್ಲಿ ಸೇರಿಸಿ ಈಗಾಗಲೇ ಜಾರಿಗೆ ತಂದಿದ್ದೇವೆ. ಆಮೇಲೆ ಹೆಚ್ಚು ಭೂಮಿ ಇರತಕ್ಕಂಥವರು ಡಿಕ್ಲೇರ್ ಮಾಡಿಕೊಳ್ಳುವು ದಕ್ಕೆ ಅವಕಾಶಕೊಟ್ಟಿರುವುದೂ ಸಾಲದೂ ಎಂದು ಹೇಳಿದ ಮೇಲೆ ಅದನ್ನು ಡಿಸೆಂಬರ್ ೯ನೇ ತಾರೀಖಿ ನವರೆಗೆ ಇದ್ದುದನ್ನು ಇನ್ನು ೩ ತಿಂಗಳು ಹೆಚ್ಚು ವಾಯಿದೆಯನ್ನು ಕೊಡತಕ್ಕದರ ಬಗ್ಗೆ ಸಹ ಒಂದು ತಿದ್ದುಪಡಿಯನ್ನೂ ತಂದಿದ್ದೇವೆ.

ಇನ್ನು ನಾವು ಗೇಣಿದಾರರಿಂದ ಪಡೆಯತಕ್ಕಂಥ ಹಣವಾಗಲೀ ಅಥವಾ ಹೆಚ್ಚುವರಿ ಭೂಮಿಯಿರ ತಕ್ಕಂಥ ಮಾಲೀಕರಿಂದ ಆಗಲಿ ಹಣವನ್ನು ಕಟ್ಟಲಿಕ್ಕೆ ಒಂದು ವಾಯಿದೆಯನ್ನು ಗೊತ್ತುಮಾಡಿದ್ದೇವೆ ಆ ವಾಯಿದೆಗಿಂತ ಹೆಚ್ಚು ಕಾಲ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಅವರ ಮೇಲೆ ನಾವು ಬಡ್ಡಿಯನ್ನು ನಿಗದಿ ಪಡಿಸಿದ್ದೇವೆ. ಅದು ಶೇಕಡ ೪½ ಇರಬೇಕೆಂದು ಈಗಿರತಕ್ಕಂಥ ಕಾನೂನಿನಲ್ಲಿ ನಿಗದಿ ಪಡಿಸಿದ್ದೇವೆ. ಈಗಿರತಕ್ಕಂಥ ಬಡ್ಡಿದರ ಬಹಳ ಕಡಿಮೆ ಎನ್ನತಕ್ಕಂಥ ದೃಷ್ಟಿಯಿಂದ ನಾಲ್ಕುವರೆ ಪರ್ಸೆಂಟ್‌ನಿಂದ ಐದು ವರೆ ಪರ್ಸೆಂಟ್‌ಗೆ ಏರಿಸಬೇಕೆಂದು ಹೇಳಿ ಇನೊಂದೂ ತಿದ್ದುಪಡಿಯನ್ನು ತಂದಿದ್ದೇವೆ.

ಇನ್ನು ತಮ್ಮಲ್ಲಿರತಕ್ಕಂಥ ಭೂಮಿಯನ್ನು ಕಾನೂನು ಪ್ರಕಾರ ಸರ್ಕಾರಕ್ಕೆ ತಿಳಿಸಬೇಕು ಹಾಗೆ ತಿಳಿಸುವಾಗ ತಪ್ಪೇನಾದರೂ ತಿಳಿಸಿದರೆ ಹಾಗೂ ಅವರು ಸರ್ಕಾರಕ್ಕೆ ತಿಳಿಸದೇ ಹೋದರೆ ಅಂಥವರಿಗೆ ಸ್ವಲ್ಪ ಉಗ್ರವಾದ ಶಿಕ್ಷೆ ಇರಬೇಕೆಂದು ಹೇಳಿ ಇನೊಂದು ತಿದ್ದುಪಡಿಯನ್ನು ತಂದಿದ್ದೇವೆ. ಅದು ಜೈಲು ಶಿಕ್ಷೆ. ೬ ತಿಂಗಳಿಗಿಂತ ಕಡಿಮೆ ಇಲ್ಲದ ಹಾಗೆ ಒಂದು ವರ್ಷಕ್ಕಿಂತ ಜಾಸ್ತಿ ಮೀರದಹಾಗೆ ಜೈಲು ಶಿಕ್ಷೆ ಅಥವಾ ಜುಲ್ಮಾನೆ ಅಷ್ಟೆಂದರೆ ೫ ಸಾವಿರ ರೂಪಾಯಿಗಳು ಹಾಗೆಂದು ಹೇಳಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇಷ್ಟು ಇದರಲ್ಲಿರತಕ್ಕಂಥ ಮುಖ್ಯವಾದ ತಿದ್ದುಪಡಿಗಳು.

೫-೦೦ P. M.

ಶ್ರೀ ಎನ್. ಹುಚ್ಚಮಾಸ್ತಿಗೌಡ —ನಾವು ಈ ತಿದ್ದುಪಡಿಗಳನ್ನು ತರುವುದರಲ್ಲಿ. ನಾವು ಅಚ್ಚು ಹಾಕಿಸಿರತಕ್ಕ ಸ್ಟೇಟ್‌ಮೆಂಟ್ ಆಫ್ ಅಬ್ಜಕ್ಟ್ ಅಂಡ್ ರೀಸನ್ಸ್‌ನಲ್ಲಿ ಮೂರು ನಾಲ್ಕು ತಪ್ಪುಗಳು ಆಚ್ಚಾಗಿವೆ ಅದು ಏನೆಂದರೆ ಒಂದನೆಯದು : ಈ ಮಸೂದೆಯ ೭ನೇ ಪುಟದ ಎರಡನೇ ಪ್ಯಾರದಲ್ಲಿ Page 7-II para "Compensation to widows and minor and disabled persons were also to be paid partly in kind and partly in cash under section 51...ಎಂದು ತಿದ್ದಿಕೊಳ್ಳಬೇಕು. ಎರಡನೆಯದು Page 7-Last Para "The original time limit for declaration under the amended sub-section (4)1 of the section 66 of the land reforms act." ಎಂದು ಓದಿಕೊಳ್ಳಬೇಕು.

ಮೂರನೆಯದು Page 8-2nd para ದಲ್ಲಿ ೬ಳ (೪) ಎಂದು ಇವೆ ಅದನ್ನು "Clause 8 of section 125 is boing amended to enhance the punishment for failure to furnish a declaration under section (64)t or for furnishing ಎಂದು ಓದಿಕೊಳ್ಳಬೇಕು.

ನಾಲ್ಕನೆಯದು ಪುಟ ೯ರಲ್ಲಿ ಮೊದಲನೆ ಲೈನಿನಲ್ಲಿ ಟ್ರಿಬ್ಯುನಲ್ ಎಂದು ಆದಮೇಲೆ ಅಂಡ್ ಇಂದ ವಾಕ್ಯ ಪೂರೈಸುವವರೆಗೆ ತೆಗೆದುಹಾಕಬೇಕು.

ನಂತರ ಕೊನೆ ಪದ ಇಯರ್ ಎಂದು ಇರುವುದಕ್ಕೆ ಬದಲು ಕ್ವಾರ್ಟರ್ ಎಂದು ಇರಬೇಕು ಇಷ್ಟು ಫೈನಾನ್ಸಿಯಲ್ ಮೆಮೋರಾಂಡಮ್‌ನಲ್ಲಿ ತಪ್ಪಾಗಿ ಇರುವುದನ್ನು ತಿದ್ದುಕೊಳ್ಳಬೇಕು ಎಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ಹೆಚ್ಚು ವಿಷಯಗಳನ್ನು ಹೇಳುವುದು ಅವಶ್ಯಕ ಇದ್ದರೂ ಕೂಡ ಸ್ವಲ್ಪ ನನಗೆ ತೊಂದರೆಯಾಗಿರುವುದರಿಂದ ನಾನು ಮಾತನಾಡಲಿಕ್ಕೆ ಅವಕಾಶವಿಲ್ಲದಂತಾಗಿದೆ. ಈಗ ಇರತಕ್ಕ ತಿದ್ದುಪಡಿ ಪ್ರಕಾರ ನಾಲ್ಕು ಕಡೆಗಳಲ್ಲಿ ಈಗ ಅಡಿಷನಲ್ ಟ್ರಿಬ್ಯುನಲ್ಸ್ ಮಾಡಬೇಕು ಎಂದು ಸರಕಾರಕ್ಕೆ ಯೋಚನೆ ಇದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯು ನಾಲ್ಕು ತಾಲೂಕುಗಳು ಅಂದರೆ ಕುಂದಾಪುರ ತಾಲೂಕಿನಲ್ಲಿ ೨೨, ೫೯೬ ಜನರು ಅರ್ಜಿ ಹಾಕಿದ್ದಾರೆ, ಉಡುಪಿಯಲ್ಲಿ ೩೩,೩೧೧ ಜನರು ಅರ್ಜಿ ಹಾಕಿದ್ದಾರೆ, ಮಂಗಳೂರಿನಲ್ಲಿ ೬೫,೧೯೦ ಜನರು ಅರ್ಜಿ ಹಾಕಿದ್ದಾರೆ, ಭಂಟವಾಳದಲ್ಲಿ ೧೫,೯೬೩ ಜನರು ಅರ್ಜಿ ಹಾಕಿದ್ದಾರೆ, ೧೫ ಸಾವಿರಕ್ಕಿಂತ ಹೆಚ್ಚು ಇರತಕ್ಕ ಈ ನಾಲ್ಕು ತಾಲೂಕುಗಳಲ್ಲಿ ಕೂಡಲೇ ಅಡಿಷನಲ್ ಟ್ರಿಬ್ಯುನಲ್ಸ್ ಮಾಡಬೇಕು ಎನ್ನುವ ಯೋಚನೆ ಸರ್ಕಾರದ ಮುಂದೆ ಇದೆ. ಈಗ ಸರ್ಕಾರಕ್ಕೆ ಲೆಕ್ಕ ಕೊಟ್ಟಿರುವ ಪ್ರಕಾರ ೪೭ ತಾಲ್ಲೂಕುಗಳಲ್ಲಿ ೧ ಸಾವಿರಕ್ಕಿಂತ ಹೆಚ್ಚು ಡಿಕ್ಲರೇಷನ್ ಬಂದಿದೆ. ಇನ್ನು ಸೆಕ್ಷನ್ ೬೬-೬೯ (ಎ) ಮತ್ತು ೬೯ (ಬಿ) ಪ್ರಕಾರ ೪೭ ತಾಲ್ಲೂಕುಗಳಲ್ಲಿ ೧ ಸಾವಿರಕ್ಕೂ ಹೆಚ್ಚು ಡಿಕ್ಲರೇಷನ್ ಬಂದಿವೆ, ಇನ್ನು ೪೮ (ಎ) ಪ್ರಕಾರ ೯ ತಾಲ್ಲೂಕಿನ ೧೦ ಸಾವಿರಕ್ಕೂ ಹೆಚ್ಚು ಡಿಕ್ಲರೇಷನ್ ಬಂದಿವೆ ಈಗ ೧೦ ಸಾವಿರಕ್ಕಿಂತ ಹೆಚ್ಚಾಗಿ ಬಾಕಿ ಇರತಕ್ಕದ್ದು ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂದರೆ ಕಾರವಾರ, ಹೊನ್ನಾವರ ಕುಮಟಾದಲ್ಲಿ ಇನ್ನು ದಕ್ಷಿಣ ಕನ್ನಡ ಬೆಲ್ಲೆಯಲ್ಲಿ, ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಬಂಟವಾಳ, ಬೆಳ್ತಂಗಡಿ ಈಗ ಎಷ್ಟು ಅರ್ಜಿಗಳು ಬಂದಿವೆ. ಅದಕ್ಕೆ ಈಗಾಗಲೇ ನಮ್ಮ ಕಾರ್ಯಕ್ರಮದ ಪ್ರಕಾರ ಭೂ ಅಭಿವೃದ್ಧಿ ಬ್ಯಾಂಕು ಮೂಲಕ ಈಗಾಗಲೇ ಸಾಲವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿ, ಮೈಸೂರು ಒಂದು ಡಿವಿಜನ್‌ನಲ್ಲೇ ಈ ತಿಂಗಳ ೧೫ನೇ ತಾರೀಖಿನೊಳಗೆ ಆಗಿರತಕ್ಕ ಕಾರ್ಯಕ್ರಮದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೮೩೨೨ ಅರ್ಜಿದಾರರಿಗೆ ೨೨ ಲಕ್ಷದ ೪೦ ಸಾವಿರ ರೂಪಾಯಿ ಹಣ ಕೊಟ್ಟಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ೨೮೨೨ಜನ ಅರ್ಜಿದಾವರಿಗೆ ೧೨ ಲಕ್ಷದ ೩೭ ಸಾವಿರದ ೭೨೨ ರೂಪಾಯಿ ಹಣ ಕೊಟ್ಟಿದ್ದಾರೆ. ಹಾಸನ ಜಿಲ್ಲೆಯಲ್ಲಿ ೧೯೨ ಜನ ಅರ್ಜಿದಾರರಿಗೆ ೪ ಲಕ್ಷ ೨೨ ಸಾವಿರದ ೬೦೯ ರೂಪಾಯಿ ಹಣ ಕೊಟ್ಟಿದ್ದಾರೆ ಕೊಡಗಿನಲ್ಲಿ ೧೬೯ಜನ ಅರ್ಜಿದಾರರಿಗೆ ೪ ಲಕ್ಷದ ೮೯ ಸಾವಿರದ ೫೮೦ ರೂಪಾಯಿ ಹಣ ಕೊಟ್ಟಿದ್ದಾರೆ ಮೈಸೂರು ಜಿಲ್ಲೆಯಲ್ಲಿ ೯೬೪ ಜನ ಅರ್ಜಿದಾರರಿಗೆ ೨೭ ಲಕ್ಷ ೫೯ ಸಾವಿರ ರೂಪಾಯಿ ಹಣ ಕೊಟ್ಟಿದ್ದಾರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ೫೨೬ ಜನ ಅರ್ಜಿದಾರರಿಗೆ ೧೭ ಲಕ್ಷದ ೧೦ ಸಾವಿರದ ೫೭೮ ರೂಪಾಯಿ ಕೊಟ್ಟಿದ್ದಾರೆ ಒಟ್ಟು ಇದು ಒಂದು ಡಿವಿಜನ್‌ನಲ್ಲಿ ೨ ಸಾವಿರದ ೯೬೫ ಜನ ಅರ್ಜಿದಾರರಿಗೆ ೨೪ ಲಕ್ಷ ೬೬ಸಾವಿರದ ೫೯೯ ರೂಪಾಯಿ ಹಣವನ್ನು ಭೂ ಅಭಿವೃದ್ಧಿ ಬ್ಯಾಂಕಿನಿಂದ ಕೊಡಿಸಿದ್ದಾರೆ. ಉಳಿದ ಡಿವಿಜನ್‌ನಿಂದ ಇನ್ನು ವರದಿ ಬಂದಿಲ್ಲ ಈಗ ಸುಮಾರು ಎಷ್ಟು ಭೂಮಿಗೆ ಸಂಬಂಧಪಟ್ಟಂತೆ ಅರ್ಜಿಗಳು ಇವೆ ಎಂದರೆ ಇದು ಸುಮಾರು ೭,೬೫೯ ಎಕರೆಗಳು ಇವೆ. ಅಷ್ಟು ಕೆಲಸವು ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಕೆಲಸವಾಗುತ್ತಿದೆ. ಈ ತಿಂಗಳ ಆಖೈರೊಳಗಾಗಿ ಇನ್ನು ಹೆಚ್ಚು ಕೆಲಸವಾದನಂತರ ಎಲ್ಲ ಡಿವಿಜನ್‌ಗಳಿಂದ ವರದಿ ತರಿಸಿ ಮಾರ್ಚ್ ತಿಂಗಳ ಆಖೈರೊಳಗಾಗಿ ಸಭೆಯ ಮುಂದೆ ಅಂಕಿಅಂಶ ಇಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಇನ್ನು ಇದರ ಬಗ್ಗೆ ಇದೇ ಕಡೆಯ ತಿದ್ದುಪಡಿ ಎಂದು ಹೇಳುವ ಹಾಗೆ ಇಲ್ಲ. ಈ ಕಾರ್ಯಕ್ರಮ ಒಂದು ಒಳ್ಳೆಯ ಜನರಿಗೆ ಅಗತ್ಯವಾಗಿ ಬೇಕಾಗಿರುವ ಕಾನೂನು, ಇದನ್ನು ಕಾರ್ಯರೂಪಕ್ಕೆ ತರುವಾಗ ಎಲ್ಲಿಯೇ ಅಡ್ಡಿ ಆಡಚಣೆ ಇರಲಿ ಅವುಗಳನ್ನು ಬಗೆಹರಿಸಿ ಜನರಿಗೆ ಬಹಳ ಬೇಗ ಸಹಾಯವಾಗಬೇಕೆಂಬ ದೃಷ್ಟಿಯಿಂದ ಒಳ್ಳೆಯ ತಿದ್ದುಪಡಿ ತರುವುದಕ್ಕೆ ಸರ್ಕಾರ ಸದಾ ಸಿದ್ಧವಾಗಿರುತ್ತದೆ. ಮಾನ್ಯ ಸದಸ್ಯರು ಅವರಿಗೆ ಇರುವ ತಕ್ಕ ಅನುಭವವನ್ನು ಅಗತ್ಯವಾದ ತಿದ್ದುಪಡಿ ಏನೇನು ತರಬೇಕು ಎನ್ನುವುದನ್ನ ಮಾನ್ಯ ಸಭೆಗೆ ತಿಂಡಿ ಬೇಕು ಎಂದು ಹೇಳಿ ನಾನು ಮಾನ್ಯ ಸದಸ್ಯರನ್ನು ಪ್ರಾರ್ಥನೆ ಮಾಡಿಕೊಳ್ಳುವುದಿಲ್ಲದೇ ಈ ತಿದ್ದುಪಡಿ

ಗಳ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು. ಮತ್ತೆ, ಈ ಕೆಲಸ ಬಹಳ ಬೇಗ ಕಾರ್ಯಗತವಾಗಿ ಜನರಿಗೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಮಾಡಲು ಸಹಾಯವಾಗಬೇಕೆಂದು ಸಭೆಯ ಮೂಲಕ ತಿಳಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ)—. ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಈ ಸದನದ ಒಪ್ಪಿಗೆಗಾಗಿ ಮಂಡಿಸಿರತಕ್ಕ ಈ ತಿದ್ದುಪಡಿ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇ . ಸ್ವಾಗತ ಮಾಡತಕ್ಕ ಸಂದರ್ಭದಲ್ಲಿ ನಾನು ಅವರಿಗೆ ಅಭಿನಂದನೆಯನ್ನು ಕೂಡ ಸಲ್ಲಿಸುತ್ತೇನೆ. ಏತಕ್ಕೆಂದರೆ ಅವರು ಕೊನೆಯ ಮಾತನ್ನು ಹೇಳಿದಾಗ ಬಹಳ ಸಂತೋಷವಾಯಿತು. ಅವರು ಕೊನೆಯ ಮಾತನ್ನು ಹೇಳುತ್ತಾ ಅದರಲ್ಲಿ ಈ ತಿದ್ದುಪಡಿಗಳು ಇಷ್ಟಕ್ಕೆ ಮುಗಿಯುತ್ತವೆ ಎನ್ನುವ ಭಾವನೆ ಇಟ್ಟುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ, ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಇನ್ನು ಅನೇಕ ತಿದ್ದುಪಡಿಗಳನ್ನು ತರಬೇಕಾಗುವ ಸಂದರ್ಭ ಬರಬಹುದು. ಅದಕ್ಕೆ ಸರಕಾರ ಹಿಂದೇಟು ಹಾಕುವುದಿಲ್ಲ ಎನ್ನುವ ಮಾತನ್ನು ಹೇಳಿದಾಗ ನನಗೆ ಬಹಳ ಸಂತೋಷವಾಯಿತು. ಇನ್ನು ಈ ಭೂ ಸುಧಾರಣೆ ಕಾನೂನಿಗೆ ಸಂಬಂಧಪಟ್ಟ ರಾಜ್ಯ ಸಚಿವರಾದ ಸುಬ್ಬಯ್ಯಶೆಟ್ಟರಿಗೂ ನಾನು ಅಭಿನಂದಿಸುತ್ತೇನೆ. ಅಧ್ಯಕ್ಷರೆ, ಈ ತಿದ್ದುಪಡಿ ಮಸೂದೆಯಲ್ಲಿ ಮಾನ್ಯ ಸಚಿವರು ವಿವರಣೆ ಕೊಟ್ಟಹಾಗೆ ಸುಮಾರು 7-8 ಪ್ರಮುಖವಾದ ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ನನ್ನ ಅನುಭವದ ಮೇಲೆ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಚ್ಛಿಸುತ್ತೇನೆ. ಈಗ ನಮ್ಮ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲಿ ಸುಮಾರು 7 ಸಾವಿರ ಚಿಲ್ಲರೆ ಅರ್ಜಿಗಳು ಇವೆ.

ಇನ್ನು ಅಡಿಷನಲ್ ಟ್ರೈಬ್ಯುನಲ್ ಮಾಡುವ ಅಂಶವನ್ನು ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ, ಕೆಲವು ಜಿಲ್ಲೆಗಳಲ್ಲಿ ಅತಿ ಒತ್ತಡ ಇದ್ದು, ಹೆಚ್ಚು ಅರ್ಜಿಗಳು ಇದ್ದಂಥ ಸಂದರ್ಭದಲ್ಲಿ ಅಡಿಷನಲ್ ಟ್ರೈಬ್ಯುನಲ್ ಮಾಡುವ ಅಗತ್ಯವಿದೆ ಎಂದು ನಾನು ಭಾವನೆ ಮಾಡುತ್ತೇನೆ ಸಾಮಾನ್ಯವಾಗಿ ಎಲ್ಲ ಜಿಲ್ಲೆಗಳಲ್ಲೂ ಹೆಚ್ಚಿನ ರೈತರಿಗೆ ಪಹಣಿ ಅನುಕೂಲಕರವಾಗಿ ಸಿಕ್ಕುತ್ತದೆ. ಆದರೆ, ಪಹಣಿ ಇಲ್ಲದೇ ಇರತಕ್ಕ ರೈತರು ಬಹಳ ಕಡಿಮೆ, ಅಪರೂಪವೆನ್ನಬಹುದು. ಮಾನ್ಯ ಉಪಾಧ್ಯಕ್ಷರ ಜಿಲ್ಲೆಯಾದ ಕಾರವಾರವನ್ನೊಳಗೊಂಡಂತೆ, ಬಿಜಾಪುರ, ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹೆಚ್ಚು ಜನ ರೈತರಿಗೆ ಪಹಣಿಗಳು ಸಿಕ್ಕುತ್ತವೆ. ನಮ್ಮ ಹಳೆಯ ಮೈಸೂರು ರಾಜ್ಯವನ್ನು ಉದಾಹರಣೆಗೆ ತೆಗೆದುಕೊಳ್ಳುವದಾದರೆ. ಪಹಣಿ ದಾಖಲೆಗಳು ಸುಮಾರು ನೂರಕ್ಕೆ ಎಪ್ಪತ್ತೈದು ಎಂಬತ್ತು ರಷ್ಟು ಇವೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಸುಮಾರು ನೂರಕ್ಕೆ ಎಂಬತ್ತೈದರಷ್ಟು ಸಿಕ್ಕುತ್ತವೆ. ಮೊನ್ನೆ ರಾತ್ರಿ ನಾನು ಅಲ್ಲಿನ ಟ್ರೈಬ್ಯುನಲ್ ಮೀಟಿಂಗ್ ಮುಗಿಸಿಕೊಂಡು ಇಲ್ಲಿಗೆ ಬಂದಿದ್ದೇನೆ. ಬೆಳಿಗ್ಗೆ ಹನ್ನೊಂದರಿಂದ ಹಿಡಿದು, ರಾತ್ರಿ 8-9 ಗಂಟೆಯವರೆಗೆ ಕುಳಿತು, ನೂರಾರು ಅರ್ಜಿಗಳನ್ನು ಒಂದೊಂದು ದಿವಸಕ್ಕೆ ನಾವು ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿಗೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ಕೆಲವರು ಇವತ್ತು ಮೈ ಹುಷಾರಾಗಿಲ್ಲ ಆದುದರಿಂದ ಹೇಳಿಕೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಮತ್ತೆ ಕೆಲವರು ಪತ್ರವನ್ನು ಕಳುಹಿಸಿಕೊಡುತ್ತಾರೆ. ಇಂಥಾ ಪ್ರಕರಣಗಳು ಅಪರೂಪ, ಮತ್ತೆ ಅಲ್ಲಿ, ಪಹಣಿ ಇರತಕ್ಕ ರೈತರಿಗೆ ಭೂಮಾಲೀಕರು ಸುಲಭವಾಗಿ ಒಪ್ಪಿಗೆ ಕೊಡುತ್ತಾರೆ, ಮತ್ತೆ ಪಹಣಿ ಇಲ್ಲದೇ ಇರತಕ್ಕವರಿಗೂ ಕೂಡ ಒಪ್ಪಿಗೆ ಕೊಡುವ ಭೂಮಾಲೀಕರೂ ಇದ್ದಾರೆ. ಇದು ನಮಗೆ ಬಹಳ ಸಂತೋಷವನ್ನುಂಟು ಮಾಡಿದೆ. ಪಹಣಿ ಇಲ್ಲದೇ ಇರತಕ್ಕ ಪ್ರಕರಣಗಳಲ್ಲಿ ಸ್ವತ್ತು ನಮ್ಮದು ಎಂದು ಭೂಮಾಲೀಕರು ವಾದವನ್ನು ಹೂಡುವುದುಂಟು. ಇಂಥಾ ಪ್ರಕರಣಗಳು ನಮ್ಮ ಭಾಗದಲ್ಲಿ ಸುಮಾರು 5 ರಿಂದ 10 ರಷ್ಟು ಬರಬಹುದು ಎಂದು ಭಾವನೆ ಹೊಂದಿದ್ದೇನೆ. ಹೀಗೆ ಪ್ರತಿ ದಿವಸ 60-70-80 ಪ್ರಕರಣಗಳನ್ನು ಇಟ್ಟುಕೊಂಡರೆ, ಒಂದು ದಿವಸಕ್ಕೆ ಸಂಪೂರ್ಣವಾಗಿ ಫೈನಲ್ ಮಾಡತಕ್ಕ ಪ್ರಕರಣಗಳು ಸುಮಾರು 30-40 ಸಿಕ್ಕುತ್ತವೆ. ಹೀಗೆ ನಾವು ದಿನವೂ ವಿಚಾರಣೆ ಮಾಡತಕ್ಕ ಪ್ರಕರಣಗಳನ್ನು ನೂರಕ್ಕೂ ಮೀರಿ ಏರಿಸಿದರೆ, ಸಂಪೂರ್ಣವಾಗಿ ಫೈನಲ್ ಆಗತಕ್ಕ ಪ್ರಕರಣಗಳು ಸುಮಾರು 60-70 ಸಿಕ್ಕುತ್ತವೆ. ಹಟ್ಟು ಹಿಡಿದು ಬಿಗಿಯಾಗಿ ಕೆಲಸ ಮಾಡಿದರೆ ನಮ್ಮ ಸೊರಬ ಭಾಗದ ಪ್ರಕರಣಗಳನ್ನು ಆದಷ್ಟು ಬೇಗ ಮುಗಿಸಬಹುದು ಎಂದು ಆಶೆ ಇಟ್ಟುಕೊಂಡಿದ್ದೇನೆ ಯಾವುದೇ ಕಾರಣದಿಂದ ವಿಳಂಬ

ವಾಗುವುದು ಬೇಡ ಎಂದು ನಾವು ನಿರ್ಧಾರ ಮಾಡಿದ್ದೇವೆ. ಆದುದರಿಂದ, ಅರ್ಜಿಗಳು ಎಲ್ಲೆಲ್ಲಿ ಹೆಚ್ಚು ಇವೆ, ಅಲ್ಲೆಲ್ಲ ಅಡಿಷನಲ್ ಟ್ರಿಬ್ಯುನಲ್‌ಗಳನ್ನ ಮಾಡುವುದರಲ್ಲಿ ನನ್ನದೇನೂ ಅಭ್ಯಂತರ ಏಲ್ಲ. ಅಷ್ಟೇ ಅಲ್ಲದೆ, 15 ಸಾವಿರಕ್ಕೂ ಮೇಲ್ಪಟ್ಟು ಅರ್ಜಿಗಳು ಯಾವ ಯಾವ ತಾಲ್ಲೂಕಿನಲ್ಲಿ ಇರುತ್ತವೋ ಅಲ್ಲೆಲ್ಲ ಅಡಿಷನಲ್ ಟ್ರಿಬ್ಯುನಲ್‌ಗಳನ್ನು ಮಾಡಬೇಕು ಎಂದು ಹೇಳುತ್ತೇನೆ. ಉಳಿತೆಲ್ಲವನ್ನೂ ಈಗ ಇರುವ ಟ್ರಿಬ್ಯುನಲ್‌ನವರು ಮಾಡಬಹುದು, ಇದರಿಂದ ತೊಂದರೆಯೇನೂ ಆಗುವುದಿಲ್ಲ. ಆದುದರಿಂದ, ಅಡಿಷನಲ್ ಟ್ರಿಬ್ಯುನಲ್ ಮಾಡುವುದನ್ನು ನಾನು ಸ್ವಾಗತ ಮಾಡುತ್ತೇನೆ. ಹೀಗೆ ಮಾಡುವ ಅಡಿಷನಲ್ ಟ್ರಿಬ್ಯುನಲ್‌ನಲ್ಲೂ. ಈಗಿರುವ ಟ್ರಿಬ್ಯುನಲ್ ಶಾಸಕರನ್ನು ಹಾಕಬೇಕೆಂದು ಸಲಹೆ ಮಾಡುತ್ತೇನೆ. ನನ್ನ ಪ್ರಕಾರವಾಗಿ ಶಾಸಕರೆಂದರೆ, ವಿಶೇಷವಾಗೇನೂ ಹುಟ್ಟಿ ಬಂದಿಲ್ಲ; ಜನತೆಯಿಂದ ಮೂಡಿಬಂದೆ ಪ್ರತಿನಿಧಿಗಳು. ಆದುದರಿಂದ, ಒಂದೇ ತಾಲ್ಲೂಕಿನಲ್ಲಿ ಎರಡು ಟ್ರಿಬ್ಯುನಲ್‌ಗಳು ಕಲಸ ಮಾಡಬೇಕಾದ ಸಂದರ್ಭ ಬಂದಾಗ, ಸಂಬಂಧಪಟ್ಟ ಶಾಸಕರು ಈ ಎರಡರಲ್ಲೂ ಕುಳಿತು ಪ್ರಕರಣಗಳ ಬಗ್ಗೆ ವಿಚಾರ ಮಾಡಬೇಕಾದುದು ಅವಶ್ಯಕವೆಂದು ನಾನು ಅಭಿಪ್ರಾಯ ಪಡುತ್ತೇನೆ. ಆ ಟ್ರಿಬ್ಯುನಲಾದರೂ ಕುಳಿತು ಕೊಳ್ಳಬಹುದು; ಈ ಟ್ರಿಬ್ಯುನಲ್‌ನಲ್ಲಾದರೂ ಕುಳಿತು ಕೊಳ್ಳಬಹುದು; ಆ ದೃಷ್ಟಿಯಿಂದ ಅವರನ್ನು ಎಕ್ಸ್ ಆಫಿಷಿಯೋ ಎಂದು ಮಾಡಬೇಕು. ಹೀಗೆ ಮಾಡಿದರೆ, ಶಾಸಕರು, ತಮ್ಮ ಅಭಿಪ್ರಾಯವನ್ನಿಡಬಹುದು, ಮಾರ್ಗದರ್ಶನ ಮಾಡಬಹುದು; ಅಥವಾ ಸಲಹೆ ನೀಡಬಹುದು. ಶಾಸಕರು ಬೇರೆಯವರಿಗಿಂತ ಚೆನ್ನಾಗಿ ವ್ಯತ್ಯಾಸಗಳನ್ನು ಪತ್ತೆ ಹಚ್ಚುತ್ತಾರೆ. ಆಗ ಕಾನೂನು ಚೌಕಟ್ಟಿನೊಳಗೆ ಪ್ರಕರಣಗಳ ಪೈಸರಾತಿಯಾಗುತ್ತದೆ ಎಂದು ನಾನು ಬಾವಿಸಿದ್ದೇನೆ. ಆದುದರಿಂದ, ಈಗ ಇರುವ ಟ್ರಿಬ್ಯುನಲ್‌ನಲ್ಲಿ ಖಾಯಂ ಆಗಿಯೂ ಮತ್ತೆ ಅಡಿಷನಲ್ ಟ್ರಿಬ್ಯುನಲ್‌ನಲ್ಲಿ ಎಕ್ಸ್ ಆಫಿಷಿಯೋ ಆಗಿ ಶಾಸಕರನ್ನು ಮಾಡಬೇಕೆಂದು ನನ್ನ ವೈಯಕ್ತಿಕ ಅಭಿಪ್ರಾಯ. ಇದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡುತ್ತಾರೆ ಎಂದು ನಾನು ಆಶಿಸುತ್ತೇನೆ.

ಇನ್ನು ಎರಡನೆಯದಾಗಿ, ಎಕ್ಸ್‌ಟೆನ್‌ಷನ್ ಆಫ್ ಟೈಂ. ಸೆಕ್ಷನ್ 48ರ ಪ್ರಕಾರ ಗೇಣಿದಾರರು ಜಪ್ತಿನಿನ ಬಗ್ಗೆ 7ನೇ ನಮೂನೆಯ ಅರ್ಜಿಯನ್ನು ಆಕ್ಯುಪೆಂಟ್ಸ್ ರೈಟ್ಸ್ ಪಡೆಯಬೇಕಾದರೆ ಕೊಡಬೇಕಾಗಿದೆ ಹೀಗೆ ಕೊಡುವ ಅರ್ಜಿಗೆ ಕೊನೆಯ ತಾರೀಖನ್ನು 31ನೇ ಜೂನ್ ವರೆಗೆ ಮುಂದುವರಿಸಿರುವುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಹೆಬ್ಬೆಟ್ಟು ಒತ್ತತಕ್ಕ ಜನರಿಗೆ ಮತ್ತು ಅನಕ್ಷರರಲ್ಲ ಜನರಿಗೆ ಇನ್ನೂ ಅರ್ಜಿ ಕೊಡುವುದಕ್ಕೆ ಬುದ್ಧಿ ಬಂದಿಲ್ಲ. ನಮ್ಮ ಸೊರಬ ತಾಲ್ಲೂಕು, ಶಿವಮೊಗ್ಗ ಮತ್ತು ಕಾರವಾರ ಜಿಲ್ಲೆಗಳನ್ನು ಬಿಟ್ಟರೆ, ಉಳಿದ ಕಡೆ ಅನೇಕ ಜನರಿಗೆ ಇನ್ನೂ ಅರ್ಜಿ ಕೊಡತಕ್ಕ ಪ್ರಜ್ಞೆಯೇ ಮೂಡಿ ಬಂದಿಲ್ಲ. ಸರ್ಕಾರದವರು ನುಗ್ರೀವಾಜ್ಞೆಗಳನ್ನು ಹೊರಡಿಸುತ್ತಿದ್ದಾರೆ; ದಿನನಿತ್ಯ ಆವುಗಳನ್ನೂ ಆಕಾಶವಾಣಿ ಮತ್ತು ಪತ್ರಿಕೆಗಳ ಮೂಲಕ ಪ್ರಚಾರ ಪಡಿಸುತ್ತಿದ್ದಾರೆ. ಆದರೆ, ಅವು ಇನ್ನೂ ಜನತೆಗೆ ಮುಟ್ಟುತ್ತಾ ಇಲ್ಲ. ನಮ್ಮ ಜಿಲ್ಲೆಯಲ್ಲೇ ಇನ್ನೂ ಅರ್ಜಿ ಸಲ್ಲಿಸದೇ ಇರುವ ಪ್ರಕರಣಗಳೂ ಬೆಳಕಿಗೆ ಬಂದಿವೆ. ಕೆಲವು ತಾಲ್ಲೂಕುಗಳಲ್ಲಿ ಭೂಮಾಲೀಕರ ಬೆದರಿಕೆಗೆ ಹೆದರಿ ಎಷ್ಟೋ ಜನ ಅರ್ಜಿ ಹಾಕುತ್ತಾ ಇಲ್ಲ; ಅಂಥಾ ಪ್ರಕರಣಗಳು ಬೇಕಾದಷ್ಟು ಇವೆ. ಬೇಕಾದರೆ ನಾನು ರುಜುವಾತುಪಡಿಸುತ್ತೇನೆ. ಅಷ್ಟೇ ಅಲ್ಲದೆ, ಈಗ ದೇಶದಲ್ಲಿ ಏನು ನಡೆಯುತ್ತಿದೆ ಎನ್ನುವುದೂ ಎಷ್ಟೋ ಜನರ ಗಮನಕ್ಕೆ ಬಂದಿಲ್ಲ. ಉದಾಹರಣೆಗೆ.—ಗುಲ್ಬರ್ಗ ಜಿಲ್ಲೆಯಲ್ಲಿ ಮೊದಲು ಅರ್ಜಿ ಹಾಕಿಕೊಂಡಿದ್ದವರ ಸಂಖ್ಯೆ ಸುಮಾರು ನಾಲ್ಕು ಸಾವಿರ; ಆಗ ನಾವೆಲ್ಲಾ ಅಲ್ಲಿ ಅಷ್ಟೇ ಪ್ರಕರಣಗಳು ಇರಬಹುದು ಎಂದು ತಿಳಿದುಕೊಂಡಿದ್ದೆವು. ಆದರೆ, ಇತ್ತೀಚೆಗೆ ಆದು 54 ಸಾವಿರಕ್ಕೆ ಏರಿಕೆಯಾಗಿರುವುದು ತಿಳಿದು ಬಂದಿದೆ. ಇನ್ನು 31 ಜೂನ್ ಮುಗಿಯುವುದರೊಳಗೆ ಆ ಸಂಖ್ಯೆ ಸುಮಾರು 60-75 ಸಾವಿರಕ್ಕೆ ಹೋಗಬಹುದು ಆದುದರಿಂದ, ಮಾನ್ಯ ಮಂತ್ರಿಗಳು, ಅಧಿಕಾರಿಗಳಿಗೆ ಆದೇಶ ಕೊಟ್ಟು, ಗುಲ್ಬರ್ಗ ಜಿಲ್ಲೆಯಲ್ಲಿ ಇದರ ಬಗ್ಗೆ ಇನ್ನೂ ಹೆಚ್ಚು ಪ್ರಚಾರ ಮಾಡಿ, ಅರ್ಜಿಗಳನ್ನು ಹಾಕುಮತೆ ಜನರಿಗೆ ತಿಳುವಳಿಕೆ ನೀಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇದೊಂದು ಒಳ್ಳೆಯ ಕಾನೂನು; ಇದರ ಸದ್ಬಳಿಯೋಗ ಪ್ರತಿಯೊಬ್ಬನಿಗೂ ಆಗುವಂತೆ ಮಾಡಲು ಇವತ್ತಿನ ದಿವಸ ಎಲ್ಲರೂ ಶ್ರಮಿಸಬೇಕಾಗಿದೆ. ಬುದ್ಧಿ ಮಾತು ಹೇಳುವುದಕ್ಕೂ, ಭಾಷಣ ಮಾಡುವುದಕ್ಕೂ, ಕಾನೂನು ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ. ಈ ವಿಚಾರದಲ್ಲಿ ನಾನು ಗುಲ್ಬರ್ಗ ಜಿಲ್ಲೆಯೊಂದಕ್ಕೇ ಹೇಳುತ್ತಾ ಇಲ್ಲ. ಅಖಂಡ ಕರ್ನಾಟಕದಲ್ಲಿ ಅವಿದ್ಯಾವಂತ ಜನರು ಎಲ್ಲ ಇರುತ್ತಾರೆ,

ಅವರಿಗೆ ಇದರ ಬಗ್ಗೆ ಅರಿವು ಮೂಡಿಸಬೇಕು. ಇದ್ದರ ಬಗ್ಗೆ ಹೆಚ್ಚು ಗಮನ ಕೊಟ್ಟು ಹೆಚ್ಚು ಹೆಚ್ಚು ಅರ್ಜಿಗಳನ್ನು ಹಾಕಿಸುವುದಕ್ಕೆ ಅಧಿಕಾರಿಗಳು ಪ್ರಯತ್ನ ಮಾಡಬೇಕು ಎಂದು ನಾನು ಹೇಳ ಬಯಸುತ್ತೇನೆ.

ಇಂಥ ದೊಡ್ಡ ಬೃಹತ ಸಮಸ್ಯೆಯನ್ನು ಬಗೆಹರಿಸಬೇಕಾದರೆ, ಅಧಿಕಾರಿಗಳ ಮೇಲೆ ಕೂಡ ಜವಾಬ್ದಾರಿ ಹಾಕಿ. ಪ್ರತಿ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಗೇಣಿದಾರರು ಇದ್ದಾರೆ, ಭೂಮಿ ಸಾಗುವಳಿ ಮಾಡದೇ ಇರುವಂಥ ಪ್ರಕರಣಗಳು ಇವೆ, ಕೋರ್ಟು ಕಾನೂನಿನ ಪ್ರಕಾರ ಸ್ವಂತದ್ದೆಂದು ತೆಗೆದು ಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ, ಆದರೆ, ಕೋರ್ಟನ್ನು ಬಿಟ್ಟು, ಕಾನೂನು ಬಾಹಿರವಾಗಿ ಯಾವ ಯಾವ ಜಮೀನ್ದಾರರ ಗೇಣಿದಾರರಿಗೆ ಭೂಮಿ ಕೊಟ್ಟಿಲ್ಲ, ಇಂಥ ವಿಚಾರಕ್ಕೂ ಕೂಡ ಅಧಿಕಾರಿಗಳ ಮೇಲೆ ಜವಾಬ್ದಾರಿ ಹಾಕಿಸಿದರೆ ಮಾತ್ರ ಇದರ ಉದ್ದೇಶ ಸಾರ್ಥಕವಾಗುತ್ತದೆ. ತಾವು ದಯಮಾಡಿ ಇದನ್ನು ಕಾನೂನಿನ ಚೌಕಟ್ಟಿನೊಳಗೆ ತಂದರೆ, ಇನ್ನೂ ಲಕ್ಷಾಂತರ ಅರ್ಜಿಗಳು ಕೋರ್ಟಿನಲ್ಲಿ ಬೀಳುತ್ತವೆ. ಇಲ್ಲದೇ ಇದ್ದರೆ ಮತ್ತೆ ಜಮೀನ್ದಾರಿ ಪದ್ಧತಿಯನ್ನು ಮುಂದುವರಿಸುತ್ತಾರೆ. ಗೇಣಿದಾರರು ಕೂಡ ಅವರ ಕೈಗೊಂಬೆಗಳಾಗಿ, ಅವರ ತೊತ್ತುಗಳಾಗಿ ಬಾಳುವುದಕ್ಕೆ ಅವಕಾಶ ಮಾಡಿಕೊಟ್ಟಹಾಗೆ ಹಾಗುತ್ತದೆ.

ಅನಂತರ ವಿಧವೆ ಮತ್ತು ಡಿಸಾಬಲ್ಡ್ ಪರ್ಸನಗೆ ಕಾಂಪನಸೇಷನ್ ಕೊಡತಕ್ಕ ವಿಷಯವನ್ನು ನಾನು ಸ್ವಾಗತ ಮಾಡುತ್ತೇನೆ. ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಂಲಕ ಈ ವ್ಯವಸ್ಥೆ ಮಾಡಿಸಿದ್ದೀರಿ ಬಹಳ ಸಂತೋಷ ಆದಕ್ಕೂ ಕೂಡ ನಾನು ಸ್ವಾಗತ ಮಾಡುತ್ತೇನೆ. ನಾಲ್ಕುವರೆ ಪರ್ಸೆಂಟ್ ಇದ್ದ ಬಡ್ಡಿದರವನ್ನು ಐದುವರೆ ಪರ್ಸೆಂಟಿಗೆ ಏರಿಸಿದ್ದಾರೆ, ಆದರೂ ಕೂಡ ಸರ್ಕಾರ ಹಣ ಕಳೆದುಕೊಳ್ಳುತ್ತದೆ ಎನ್ನುವುದು ಗೊತ್ತಿದೆ. ಡಿಕ್ಲೇರೇಷನ್ ಸರ್‌ಪ್ಲಸ್ ರ್ಯಾಂಡ್ ಪತ್ರ ಹಚ್ಚುವುದಕ್ಕೋಸ್ಕರ ಕಾಲವನ್ನು 90 ದಿವಸ ಜಾಸ್ತಿ ಮಾಡಿದ್ದಾರೆ, ಅದನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ. ಡಿಸೆಂಬರ್ 9ನೇ ತಾರೀಖು 1975 ಇದ್ದುದನ್ನು ಮುಂದುವರಿಸಿದ್ದಾರೆ, ಇದರಿಂದ ಡಿಕ್ಲೇರೇಷನ್ ಕರೆಕ್ಟಾಗಿ ಕೊಡದಿದ್ದರೆ, ತಪ್ಪಾಗಿ ಕೊಟ್ಟಿದ್ದರೆ ತೊಂದರೆಯಾಗುತ್ತದೆ ಅದನ್ನು ನಿವಾರಿಸುವುದಕ್ಕೆ ಅನುಕೂಲವಾಯಿತು.

ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುವುದರ ಜೊತೆಯಲ್ಲಿ ಇನ್ನು 3-4 ಸಲಹೆಗಳನ್ನು, ನನಗೆ ಬಂದಿರತಕ್ಕ ಕೆಲವು ಅನುಭವಗಳನ್ನು ತಮ್ಮ ಮುಂದೆ ಹೇಳುತ್ತೇನೆ, ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಾಗಲೀ, ಮುಂದೆ ತರತಕ್ಕಂಥ ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡತಕ್ಕ ಸಮಯದಲ್ಲಾಗಲೀ ತಿಳಿಸಲು ಅನುಕೂಲವಾಗಬಹುದು. ಪ್ರೊಸೆಸ್ ಫೀ ಎಂದು ವಸೂಲುಮಾಡುತ್ತಾರೆ. ಇದರ ಬಗ್ಗೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಅಕೌಂಟ್ ಇಡುವುದಕ್ಕೆ ಆಗುವುದಿಲ್ಲ, ಇದನ್ನು ಕಾನ್ಸಲ್ ಮಾಡುವುದು ಒಳ್ಳೆಯದು.

ಎರಡನೆಯದು, ರೀ ಗ್ರಾಂಟ್ ಕೇಸಸ್, 6 ಪಟ್ಟು 20 ಪಟ್ಟು ಹಣ ಕಟ್ಟಬೇಕಾಗಿತ್ತು, ಕಾನೂನು ಪ್ರಕಾರ ಸರ್ಕಾರದ ವಶದಲ್ಲಿರುತಕ್ಕ ಜಮೀನಿನ ಮೇಲೆ ಗೇಣಿದಾರ ಎಂದು ಹೇಳುವುದಕ್ಕೆ ಬರುವುದಿಲ್ಲ. ಹುಂಬಳಿ ಜಮೀನುಗಳು ಸರ್ಕಾರಕ್ಕೆ ಕಾನೂನು ಪ್ರಕಾರ ಬಂದಿವೆ, ರೀಗ್ರಾಂಟ್ ಆಗಿಲ್ಲ, ಹಣ ಕಟ್ಟಿದರೂ ಕೂಡ ಆರ್ಡರ್ಸ್ ಆಗಿಲ್ಲ. ಇಂಥ ವಿಚಾರಗಳಿಗೆ ಗಮನ ಕೊಟ್ಟು, ರೀಗ್ರಾಂಟ್ ಮಾಡಿ ಟ್ರಿಬ್ಯೂನಲ್ಸ್ ಕಮಿಟಿಗಳಿಗೆ ಬರುವ ಹಾಗೆ ಮಾಡಿದರೆ, ಕೂಡಲೇ ಕೇಸುಗಳನ್ನು ಬಗೆಹರಿಸಬಹುದು.

ಮೂರನೆಯದಾಗಿ, ಮೆಸ್‌ರ್‌ಮೆಂಟ್ ಫೀ, ಸ್ವಾಮಿ, ಒಂದೇ ಸರ್ವೆ ನಂಬರಿನ ಜಮೀನನ್ನು 3-4 ಜನಕ್ಕೆ ಕನ್ವೀಡರ್ ಮಾಡುತ್ತಾರೆ. ಮೆಷರ್‌ಮೆಂಟ್ ಫೀ ಕಲೆಕ್ಟ್ ಮಾಡಲಕ್ಕೆ ಬೇರೆ ಇಲಾಖೆಗೆ ಬರುತ್ತದೆ. ಮೆಷರ್‌ಮೆಂಟ್ ಫೀ 10-15-20-25-50 ರೂಪಾಯಿ ಬರಬಹುದು ಈ ಹಣವನ್ನು ವಸೂಲು ಮಾಡುವುದು ಬೇಡ. ಈ ಹಣವನ್ನು ಆಕ್ಯುಪೆನ್ಸಿಪ್ರೈಸ್ ಜೊತೆಗೆ ಆಡ್ ಮಾಡಿದರೆ, ಇದು 20 ವರ್ಷಗಳಲ್ಲಿ ಡಿಪೈಡ್ ಆಗುತ್ತದೆ. ಈ ವಿಚಾರವನ್ನು ನಮ್ಮ ಟ್ರಿಬ್ಯೂನಲ್ ಸಮಿತಿಯವರು ಅಭಿಪ್ರಾಯಪಟ್ಟರು, ಇದು ಒಳ್ಳೆಯ ಸಲಹೆ ಎಂದು ನಾನಾದರೂ ಭಾಷಣುತ್ತೇನೆ.

ಇನ್ನು ನಾಲ್ಕನೆಯದು ಪ್ರಮುಖವಾದ ಸಲಹೆ ಇದು ಪಾಲಿಸಿ ಮ್ಯಾಟರ್ ಆಗಿ ಬರಬಹುದು, ಪರಿಹಾರಧನ ಕೊಡತಕ್ಕ ವಿಷಯದಲ್ಲಿ ಅರ್ಧ ಎಕರೆ ಇದ್ದರೂ ಕೊಡಬೇಕಾಗುತ್ತದೆ. ಒಳ್ಳೆಯ ಕಾನೂನುಗಳನ್ನು ಎಷ್ಟೋ ತಂದಿದ್ದೀರಿ ; ಪ್ರಗತಿಪರವಾದ ಭೂಸುಧಾರಣ ತಿದ್ದುಪಡಿ ಮಸೂದೆಯನ್ನು ಕೂಡ ತಂದಿದ್ದೀರಿ ; ಒಳ್ಳೆಯ ಹೆಸರು ಪಡೆಯತಕ್ಕಂಥ ಈ ಸಂದರ್ಭದಲ್ಲಿ, ಭೂಮಾಲೀಕರಿಗೆ ಕೊಡುವ ಪರಿಹಾರಧನದ ಹೊರೆ ಸರ್ಕಾರದ ಮೇಲೆ ಇದೆ, ಇದನ್ನು ಎಲ್ಲರೂ ಕಟ್ಟುವುದು ಬೇಡ. ನಾನು 4 ವರ್ಗಗಳ ಹೆಸರನ್ನು ಹೇಳುತ್ತೇನೆ, ಒಂದು ಮಳೆಯ ನೀರಿನ ಆಶ್ರಯ ಇರತಕ್ಕಂದು ಒಂದು ಎಕರೆ ತರೀ ಜಮೀನು. ಎರಡನೆಯದು, ಇರಿಗೇಟೆಡ್ ಲ್ಯಾಂಡ್ ಅರ್ಧ ಎಕರೆ; ಗಾರ್ಡನ್ ಲ್ಯಾಂಡ್ 10 ಗುಂಟೆಗಳು, ಡ್ರೈ ಲ್ಯಾಂಡ್ 2 ಎಕರೆಗಳು ಈ ನಾಲ್ಕು ವರ್ಗಜನ ಕಟ್ಟತಕ್ಕ ಪರಿಹಾರಧನವನ್ನು ಸಂಪೂರ್ಣವಾಗಿ ರದ್ದುಮಾಡತಕ್ಕ ವಿಚಾರವನ್ನು ಸರ್ಕಾರ ಅರೋಜನೆ ಮಾಡಿ ಸರ್ಕಾರವೇ ಕಟ್ಟುವುದು ಒಳ್ಳೆಯದು. ಇವತ್ತು ಪ್ರಗತಿಪರವಾದ ಮಸೂದೆಯನ್ನು ಏನು ತರುತ್ತಿದ್ದೀರಿ, ಇದಕ್ಕೆ ಮತ್ತೊಂದು ದೊಡ್ಡ ಕಿರೀಟ ಇಟ್ಟಹಾಗೆ ಆಗುತ್ತದೆ. ಇದನ್ನು ಒಂದು ನೀತಿಯ ಪ್ರಶ್ನೆಯಾಗಿ ತೆಗೆದುಕೊಂಡು, ಬಡವರಿಗೆ ಸಹಾಯ ಮಾಡುವ ದೃಷ್ಟಿಯಿಂದ ನಾನು ಕೊಟ್ಟಿರತಕ್ಕ ಸಲಹೆಗಳನ್ನು ಪರಿಶೀಲನೆ ಮಾಡಬೇಕೆಂದು ಹೇಳಿ, ತಿದ್ದುಪಡಿ ಮಸೂದೆಗೆ ಸ್ವಾಗತ ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30 P. M.

ಶ್ರೀ ಎಸ್. ಎಂ ಶೀಘನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಕೆಲವೊಂದು ನ್ಯೂನತೆಗಳು ಇದ್ದರೆ ನೀವು ತಿಳಿಸಬೇಕು ಅಂತ ಅಭಿಪ್ರಾಯಪಟ್ಟಿದ್ದರಿಂದ ನಮಗೆ ಈಬಗ್ಗೆ ಮಾತನಾಡಲು ಅವಕಾಶ ಸಿಕ್ಕಿತು.

ಈವೊತ್ತು ಈ ಭೂಸುಧಾರಣಾ ಶಾಸನದಲ್ಲಿ ಏನು ತಿದ್ದುಪಾಟು ಮಾಡಿದ್ದಾರೋ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಮ್ಮ ಕಾನೂನು ರೀತ್ಯಾ ಒಬ್ಬ ರೆವಿನ್ಯೂ ಅಧಿಕಾರಿಯನ್ನು ಇದಕ್ಕೆ ಥೇರ್ಮನ್ ಆಗಿ ಮಾಡಿದ್ದಾರೆ. ಸರ್ಕಾರದಿಂದ ಅನೇಕಾನೇಕ ಸರ್ಕುಲರ್ಸ್ ಈ ಬಗ್ಗೆ ಅಧಿಕಾರಿಗೆ ಬರುತ್ತವೆ, ಕೆಲವೊಮ್ಮೆ ನೋಡಿದರೆ ಆ ಸರ್ಕುಲರ್‌ಗೂ ಈ ಭೂಸುಧಾರಣೆಯಲ್ಲಿರತಕ್ಕಂಥಾ ಕಾನೂನಿಗೂ ಬಹಳ ವ್ಯತ್ಯಾಸ ಇದೆ. ಇದನ್ನು ನಾವು ದಿವಸವೂ ನೋಡುತ್ತಿದ್ದೇವೆ. ಸರಕಾರಿ ಅಧಿಕಾರಿಯಾಗಿರತಕ್ಕಂಥಾವನು ಇದಕ್ಕೆ ಥೇರ್ಮನ್ ಆಗಿರುವುದರಿಂದ ಈ ಸರ್ಕ್ಯುಲರ್ ಬಗ್ಗೆ ಏನು ಇದೆ ಅನ್ನುವುದನ್ನು ಗಮನದಲ್ಲಿಡಬೇಕು ಆದರೆ ಅದು ಎನಾಕ್ಟ್‌ಮೆಂಟಿಗೆ ವಿರುದ್ಧವಾಗುತ್ತದೆ. ನನ್ನ ಹತ್ತಿರ ಆ ಬಗ್ಗೆ ಬೇಕಾದಷ್ಟು ಸರ್ಕುಲರ್ ಇತ್ತು. ಅದನ್ನು ಈಗ ತರುವುದಕ್ಕಾಗಲಿಲ್ಲ, ಅದಕ್ಕಾಗಿ ಕ್ಷಮಿಸಬೇಕು ಎಂದು ಕೇಳುತ್ತೇನೆ. ಇದುವರೆಗೆ ಈ ಬಗ್ಗೆ ಯಾವ ಯಾವ ಸರ್ಕುಲರ್ ಕಳುಹಿಸಿದ್ದಾರೋ ಅವೆಲ್ಲವನ್ನೂ ತರಿಸಿಕೊಂಡು ಈ ಕಾನೂನಿನಲ್ಲೇ ಅದನ್ನೆಲ್ಲಾ ಆಳವಡಿಸಿಕೊಂಡಿದ್ದರೆ ಚೆನ್ನಾಗಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ತಾವು ಈ ಒಂದು ಆರ್ಡಿನನ್ಸ್‌ನಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಮುಖಾಂತರ ಆ ಭೂಮಾಲೀಕರಿಗೆ ಪರಿಹಾರಧನವನ್ನು ಕೊಡಿಸಬೇಕು ಅಂತ ಒಂದು ತಿದ್ದುಪಡಿ ತಂದಿದ್ದೀರಿ. ಈ ಆರ್ಡಿನನ್ಸ್ ಬಂದ ಮೇಲೂ ಕೂಡ ಅನೇಕ ರೈತರಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಮುಖಾಂತರ ಸಾಲ ಸವಲತ್ತು ಸಿಕ್ಕುತ್ತದೆ ಅನ್ನುವ ಪ್ರಶ್ನೆ ಇಲ್ಲ. ಈ ಬಗ್ಗೆ ಕೆಳಮಟ್ಟದ ರೆವಿನ್ಯೂ ಅಧಿಕಾರಿಗಳಿಂದ ಹೆಚ್ಚು ಪ್ರಚಾರವಾಗಬೇಕೆಂದು ಹೇಳುತ್ತೇನೆ. ಈ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಅವರಿಗೆ ಪರಿಹಾರವನ್ನು ಕೊಡಬಹುದು ಆಲ್ಲದೆ ಆತನಿಗೆ ಅರಿವು ನವುಗೆ ಇದರ ಮುಖಾಂತರ ಸಾಲ ಸವಲತ್ತುಗಳು ದೊರೆಯುತ್ತವೆ ಅಂತ ಆತನಿಗೆ ಅರಿವು ಬರುವವರಿಗೆ ಪ್ರಚಾರ ಆಗಬೇಕಾದ್ದು ಅವಶ್ಯಕ, ಜಮೀನು ಇದ್ದವರಿಗೂ ಕೂಡ ಇದರಿಂದ ಅನುಕೂಲವಾಗುತ್ತದೆ ಅನ್ನುವುದು ಅವರಿಗೆ ತಿಳಿಯುವಂತರಾಗಬೇಕು. ಇದುವರೆಗೂ ಕೂಡ ನಮ್ಮ ರೈತರಿಗೆ ಈ ಬ್ಯಾಂಕ್ ಮುಖಾಂತರ ಸಾಲ ಸಿಕ್ಕುತ್ತದೆ ಅನ್ನುವದು ಗೊತ್ತಿಲ್ಲ. ಈ ಪೊತ್ತು ಈ ಜಮೀನಿನ ಬಗ್ಗೆ ಡಿಕ್ಲರೇಷನ್ ಕೊಡುವ ಅವಧಿಯನ್ನು ಜೂನ್ ತಿಂಗಳವರೆಗೂ

ಮುಂದುವರೆಸಿದ್ದೀರಿ. ಬಹಳ ಸಂತೋಷ. ಈ ಬಗ್ಗೆ ನನ್ನ ಅಭಿಪ್ರಾಯ ಹೇಳುವುದಾದರೆ ಎಲ್ಲಿಯವರೆಗೆ ನಮ್ಮ ರೈತರು ಡಿಕ್ಲರೇಷನ್ ಹಾಕುವುದಿಲ್ಲವೊ ಅಲ್ಲಿಯವರೆಗೂ ಈ ಡಿಕ್ಲರೇಷನ್ ಕೊಡುವ ಅವಧಿಯನ್ನು ಮುಂದುವರಿಸಬೇಕೆಂದು ಹೇಳುತ್ತೇನೆ. ಶ್ರೀಮಾನ್ ಬಂಗಾರಪ್ಪನವರು ಹೇಳಿದರು ಈವೊತ್ತಿನ ದಿವಸ ಅವರ ಕ್ಷೇತ್ರದ ಕೆಲವು 3-4 ತಾಲ್ಲೂಕು ಬಿಟ್ಟರೆ ಬೇರೆಯವರು ಯಾರೂ ಡಿಕ್ಲರೇಷನ್ ಕೊಟ್ಟಿಲ್ಲ ಎಂದು. ಅಷ್ಟೇ ಏಕೆ ನನ್ನ ಕ್ಷೇತ್ರವನ್ನೇ ತೆಗೆದುಕೊಳ್ಳಿ 3-4 ತಾಲ್ಲೂಕು ಬಿಟ್ಟರೆ ಬೇರೆಯವರು ಯಾರೂ ಕೊಟ್ಟಿಲ್ಲ, ಬಯಲು ಸೀಮೆಯಲ್ಲಿರುವ ಜನರ ಅಭಿಪ್ರಾಯಕ್ಕೂ ಮತ್ತು ಮಲೆನಾಡಿನಲ್ಲಿರುವ ಜನರ ಅಭಿಪ್ರಾಯಕ್ಕೂ ಬಹಳ ವ್ಯತ್ಯಾಸ ಇದೆ. ನಮ್ಮ ಕಡೆಯಲ್ಲಿರುವ ಜನರ ಅಭಿಪ್ರಾಯ ಹೇಳುವುದಾದರೆ ತಾನು ಡಿಕ್ಲರೇಷನ್ ಕೊಟ್ಟರೆ ಆ ಜಮೀನು ಸಿಕ್ಕುತ್ತದೆ ಅನ್ನುವ ಭಾವನೆ ಅವರಿಗೆ ಇಲ್ಲವೇ ಇಲ್ಲ. ಯಾರ ಜಮೀನು ಯಾರಿಗೆ ಆಗುತ್ತದೋ ? ಅದು ನಮಗೆ ಆಗುತ್ತದೆಯೇ ಅನ್ನುವ ಭಾವನೆ ಇದೆ. ಇನ್ನು ಕೆಲವು ಕಡೆ ಮುಂಜುನಾಥನ ಆಣೆ ಹಾಕಿಸಿಕೊಂಡು ಡಿಕ್ಲರೇಷನ್ ಕೊಡದೇ ಇರುವ ಜನರು ಇದ್ದಾರೆ, ಹಿದುದರಿಂದ ನಾನು ಹೇಳುವುದು ಸರ್ಕಾರದವರು ಅಂಥವರನ್ನು ಪತ್ತೆ ಹಚ್ಚಿ ಈ ಡಿಕ್ಲರೇಷನ್ ಅವರಿಂದ ಕೊಡಿಸುವಂತೆ ಕೆಲಸ ಮಾಡಿಸಬೇಕು, ಎಲ್ಲರ ಮನೆ ಬಾಗಿಲಿಗೂ ಹೋಗಿ ಈ ನಮೂನಾ ಚಾರವನ್ನು ಮುಟ್ಟಿಸಬೇಕು. ಇಲ್ಲದೇ ಹೋದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಹೇಳುತ್ತೇನೆ.

ಇನ್ನು ನೀವು ತಂದಿರತಕ್ಕಂಥಾ ತಿದ್ದುಪಡಿಯಲ್ಲಿ ಭೂಮಾಲೀಕರೂ ಹಾಕಬೇಕಾದಂಥ ಡಿಕ್ಲರೇಷನ್ ಎನು ಇದೆ ಅದಕ್ಕೂ ಕೂಡ ತಾವು ಅವಧಿಯನ್ನು ಹೆಚ್ಚಿಸಿದ್ದೀರಿ. ಈ ಅವಧಿಯನ್ನು ಹೆಚ್ಚಿಸುವುದಷ್ಟೇ ಅಲ್ಲದೆ ತಮ್ಮ ಕಡೆ ಇರುವ ಸಿ.ಐ.ಡಿ. ವರ್ಗದವರನ್ನು ಬಿಟ್ಟು ಯಾರು ಯಾರು ಡಿಕ್ಲರೇಷನ್ ಹಾಕಿಲ್ಲ ಅಂಥಾವರನ್ನು ಪತ್ತೆ ಹಚ್ಚಿಸಿ ಅವರಿಗೆ ಶಿಕ್ಷೆ ಕೊಡುವಂಥಾ ಒಂದು ಪ್ರಯತ್ನ ಮಾಡಬೇಕು. ಇಷ್ಟೇ ಅಲ್ಲದೆ ಅನೇಕ ಚೀನಾಮಿ ಜಮೀನ್ದಾರರು ಆ ರೈತರ ಕೈಯಲ್ಲಿ ಡಿಕ್ಲರೇಷನ್ ಹಾಕಿಸದೆ ಅವರ ಮೇಲೆ ಹತ್ತಿಕ್ಕಿ ಹಣೆಯೇ ಇಟ್ಟುಕೊಳ್ಳುತ್ತಿದ್ದಾರೆ. ಅಂಥಾ ಜನರು ಯಾರು ಇದ್ದಾರೆ ಅವರನ್ನು ಆದಷ್ಟು ಬೇಗ ಬೆಳಕಿಗೆ ತರಬೇಕು ಎಂದೂ ಹೇಳುತ್ತೇನೆ,

ಇನ್ನು ಟ್ರಿಬ್ಯೂನಲ್ ವಿಚಾರ ಹೇಳುವುದಾದರೆ ಮುಜರಾಯಿ ಜಮೀನಿನಲ್ಲಿ ಯಾರು ಗೇಣಿ ಮಾಡಿಕೊಂಡಿರುತ್ತಾನೋ ಆತನು ಡಿಕ್ಲರೇಷನ್ ಹಾಕಿದರೆ ಅದನ್ನು ದಫರ್ ಮಾಡಿಬಿಡುತ್ತಾರೆ. ಇದು ನಮಗೆ ಸಂಬಂಧವಿಲ್ಲ ಮುಂಜರಾಯಿಗೆದೆ ಹೋಗಿ ಡಿಕ್ಲೇರ್ ಮಾಡಿಕೊಳ್ಳಬೇಕು ಎಂದು ಹೇಳುತ್ತಾರೆ. ಇದರಿಂದ ಟ್ರಿಬ್ಯೂನಲ್‌ನಲ್ಲಿ ಅವರಿಗೆ ನ್ಯಾಯ ಸಿಗುವುದಲ್ಲ. ಈ ಬಗ್ಗೆ ಅವನಿಗೆ ಇತ್ಯರ್ಥವೂ ಕೂಡ ಆಗುವುದಿಲ್ಲ. ಇನ್ನು ಮುಜರಾಯಿ ಜಮೀನಿನಲ್ಲಿ ಗೇಣಿ ಮಾಡಿಕೊಂಡಿರತಕ್ಕಂಥಾ ರೈತನಿಂದ ತನಚ್ಕೆ ಗೇಣಿಯನ್ನು ಹೆಚ್ಚಿಸುವುದಕ್ಕೆ ಇದರಲ್ಲಿ ಕಾನೂನು ಇಲ್ಲ. ಅಲ್ಲವೆ ಮುಜರಾತಿ ಜಮೀನನ್ನು ಮಾಡಿಕೊಂಡಿರತಕ್ಕಂಥಾವರಿಂದ ಕಲವರಿಂದ ಡಿಕ್ಲರೇಷನ್ ಹಾಕಿಸಿರುವುದಿಲ್ಲ, ನನ್ನ ಕ್ಷೇತ್ರದಲ್ಲಿ ಈ ರೀತಿ ನಡೆಯುತ್ತಾ ಇದೆ. ಶ್ರೀಮಾನ್ ಕೊಣಂದೂರು ಲಿಂಗಪ್ಪನವರು ಈವೊತ್ತು ಇದ್ದಿದ್ದರೆ ತೀರ್ಥಹಳ್ಳಿ ವಿಚಾರ ಹೇಳುತ್ತಿದ್ದರು. ಈವೊತ್ತು ಅಲ್ಲಿ ನಗದಿ ಶಿಸ್ತು ಅಂತ ಇದೆ. ಒಂದು ಎಕರೆಗೆ 4-5 ರೂಪಾಯಿ ಎಂತರೋ ಅಥವಾ ಏನಾದರೂ ಒಂದು ರಿವಾರ್ಡ್ ಕೊಡುವುದಾಗಲಿ ಅಥವಾ ಅವನಿಗೆ ಇಂತಿಷ್ಟು ಭತ್ತ ಕೊಡತಕ್ಕದ್ದು ಅಂತಾಗಲಿ ಈ ಮುಜರಾಯಿ ಜಮೀನು ಮಾಡತಕ್ಕಂಥಾವನ ಮೇಲೆ ಇದೆ, ಈ ರೀತಿ ಇರುವುದರಿಂದ ಆ ರೈತರಿಗೆ ಈ ವಿಚಾರದಲ್ಲಿ ನ್ಯಾಯಾದ ನ್ಯಾಯ ದೊರಕಿಸಬೇಕು ಅನ್ನುವ ವಾದವನ್ನು ನಾನು ತಮ್ಮ ಮುಂದೆ ಮಂಡಿಸುತ್ತೇನೆ. ಈ ಎರ್ಲಾ ಅಂಶಗಳನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಇವನ್ನೆರ್ಲಾ ನರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಮಿತ್ರರಾದಂಥಾ ಶ್ರೀಮಾನ್ ಬಂಗಾರಪ್ಪನವರು ಒಂದು ಮಾತು ಹೇಳಿದರು ಅರ್ಧ ಎಕರೆ ಬಾಗಾಯಿತು ಜಮೀನು ಕೊಡತಕ್ಕಂಥಾ ಜಮೀನ್ದಾರರಿಗೆ ಪರಿಹಾರಧನವನ್ನು ಕೊಡಕೂಡದು ಎಂದು. ಹಾಗಾದರೆ ಆ ಭೂಮಾಲೀಕನ ಗತಿ ಏನು ?

ಶ್ರೀ ಎಸ್. ಬಂಗಾರಪ್ಪ —ತಾವು ತಪ್ಪು ಅಭಿಪ್ರಾಯ ತಿಳಿದುಕೊಂಡಿದ್ದೀರಿ. ಅಂಥಾವರಿಗೆ ಪರಿಹಾರ ಧನವನ್ನು ಸರ್ಕಾರವೇ ಕೊಡಬೇಕು. ಅಂಥ ಭೂಮಾಲೀಕರಿಗೆ ಗೇಣಿದಾರರಿಂದ ಕೊಡುವುದು ಬೇಡ ಎಂದು ನಾನು ಹೇಳಿದ್ದು. ನೀವು ಮಾತನಾಡುವಾಗ ಹಾಗೆ ಹೇಳಲಿಲ್ಲ, ನೀವು ಏನೂ ಹೇಳಿದರೂ ಈ ಬಗ್ಗೆ ಅದು ರೆಕಾರ್ಡ್‌ನಲ್ಲಿ ಇದೆ. ಸರ್ಕಾರದವರೇ ಅಂಥಾವ್ರಿಗೆ ಪರಿಹಾರಧನ ಕೊಡಬೇಕು ಎಂದು ಹೇಳುವುದಾದರೆ ಅದಕ್ಕೆ ನನ್ನ ದ್ರುಡ ಕೂಡ ಸಂಪೂರ್ಣ ಬೆಂಬಲ ಇದೆ, ಸಂಬ್ಗಾರರಿಗೆ ಗ್ರಾಚ್ಯುಯಿಟಿ ಫಂಡ್ ಅಂತ ಕೊಡುವಾಗ ಈ ಬಡ ಗೇಣಿದಾರರಿಗೆ ಈ ರೀತಿಯಾಗಿ ಎತಕ್ಕೆ ಸಹಾಯ ಮಾಡಬಾರದು ? ಆನಂತರ ಇದರಲ್ಲಿ ಇನ್ನೂ ಕೆಲವು ತಿದ್ದುಪಡಿಗಳನ್ನೂ ತಂದಿದ್ದೀರಿ. ತಾವು ಈ ಬಗ್ಗೆ ಆಶ್ವಾಸನೆ ಕೊಟ್ಟಿದ್ದೀರಿ ಎನೆಂದರೆ ಈ ಜ್ವಾಲಂತವಾದ ಶಾಸನ ಏನು ಇದೆಯೋ ಇದನ್ನು ಕಾಲಕ್ಕನುಸಾರವಾಗಿ ಯಾವುದನ್ನಾದರೂ ಕೂಡ ಆ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಬಹುದು ಎಂದು, ಅದಕ್ಕಾಗಿ ನಾನು ಚ ಇದಕ್ಕೆ ಸಂಪೂರ್ಣ ಲೆಂಬಲ ಕೊಟ್ಟು ಏನಾ ಅಧ್ಯಪರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ವಿ. ಕಕ್ಕಿಲಾಯ ಬಂಟವಾಳ.—ಅಧ್ಯಕ್ಷರೇ ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಹೆಜ್ಜೆ ಹೆಜ್ಜೆಗೂ ಈ ಭೂಸುಧಾರಣಾ ಶಾಸನಕ್ಕೆ ಅಗತ್ಯ ಕಂಡುಬಂದಾಗಲೆಲ್ಲಾ ಬೇಕಾದ ತಿದ್ದುಪಡಿಗಳನ್ನು ತರುವ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಷ್ಟೇ ಅಲ್ಲ ಆ ಆಶ್ವಾಸನೆಯಂತೆ ಈ ಒಂದುತಿದ್ದುಪಡಿ ತಂದಿರುವುದಕ್ಕಾಗಿ ಸರ್ಕಾರವನ್ನು ಮತ್ತು ಮಾನ್ಯ ಕಂದಾಯ ಸಚಿವರನ್ನೂ ಕೂಡ ಅಭಿನಂದಿಸುತ್ತೇನೆ.

ಇದರಲ್ಲಿ ಮೊಟ್ಟಮೊದಲನೆಯದಾಗಿ ಹೇಳುವುದಾದರೆ ಕೆಲವು ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೇಣಿದಾರರ ಅರ್ಜಿಗಳು ಏನು ಇವೆಯೋ ಅಂಥಾ ಕಡೆ ಅವುಗಳ ಬಗ್ಗೆ ಬಹು ಬೇಗನೆ ತೀರ್ಮಾನ ಮಾಡಬೇಕಾದರೆ ಈಗ ಇರುವ ಒಂದೊಂದು ಟ್ರಿಬ್ಯೂನಲ್‌ಗಳು ಸಾಕಾಗುವುದಿಲ್ಲ. ಅಂಥಾ ಕಡೆ ಇನ್ನೂ ಒಂದೊಂದು ಆಗಲೆ ಅಥವಾ ಎಷ್ಟು ಬೇಕೋ ಅಷ್ಟಷ್ಟು ಟ್ರೈಬ್ಯೂನಲ್‌ಗಳು ರಚನೆ ಮಾಡುವುದಕ್ಕೆ ತಾವು ಈಗಾಗಲೇ ಈ ಅಧಿಕಾರವನ್ನು ತಗೆದು ಕೊಂಡಿದ್ದೀರಿ.

ಇದು ಬಹಳ ಸೂಕ್ಷ್ಮವಾದುದು. ಇದರ ಬಗ್ಗೆ ಒಂದು ಮಾತನ್ನು ಹೇಳಬೇಕೆಂದರೆ, ಈ ರೀತಿ ಕೇವಲ ಟ್ರಿಬ್ಯುನಲ್‌ಗಳನ್ನು ಜಾಸ್ತಿ ಮಾಡಿದ ಮಾತ್ರಕ್ಕೆ ಈ ಭೂಸುಧಾರಣೆ ಶಾಸನವನ್ನು ಜಾರಿ ಮಾಡುವ ಕೆಲಸ ತೀವ್ರಗತಿಯಿಂದ ಸಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಟ್ರಿಬ್ಯುನಲ್‌ಗಳನ್ನು ಜಾಸ್ತಿ ಮಾಡುವುದು ಅವಶ್ಯಕವಿದೆ. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಅವನ್ನು ಮಾಡುವುದರ ಜೊತೆಯಲ್ಲಿಯೇ ಇನ್ನೂ ಕೆಲವು ಕ್ರಮಗಳನ್ನು ಕೈಕೊಂಡರೆ ಈ ಶಾಸನವನ್ನು ತೀವ್ರವಾಗಿ ಜಾರಿಗೆ ತರಲು ಅವಕಾಶವಾಗುತ್ತದೆಂದು ಹೇಳುತ್ತೇನೆ. ಆ ಕ್ರಮಗಳು ಎನೆಂದು ಹೇಳುವುದಾದರೆ, ಮೊದಲನೆಯದಾಗಿ, ಇಡೀ ದೇಶದಲ್ಲಿ ಮೊಟ್ಟ ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿಯೇ ಪ್ರಥಮವಾಗಿ, ಈ ಒಂದು ಶಾಸನವನ್ನು ಜಾಗ್ರತೆ ಜಾರಿಗೆ ತರಬೇಕೆಂಬ ಉದ್ದೇಶದಿಂದ ಒಬ್ಬರು ರಾಜ್ಯಸಚಿವರನ್ನು ಅದಕ್ಕಾಗಿ ನೇಮಕ ಏನೋ ಮಾಡಲಾಯಿತು ; ಇದಕ್ಕಾಗಿಯೇ ಒಬ್ಬರು ರಾಜ್ಯ ಸಚಿವರನ್ನು ನೇಮಕ ಮಾಡಿದ ಕ್ಕಾಗಿ ನಾವು ಮಾನ್ಯ ಮುಖ್ಯಮಂತ್ರಿಯವರನ್ನು ಈ ಹಿಂದೆಯೇ ಅಭಿನಂದಿಸಿದ್ದೇವೆ. ಆದರೆ ಅದರ ಒಂದು ಕೆಲಸದ ಉಪಯೋಗವನ್ನು ಈ ಶಾಸನವನ್ನು ಜಾರಿಗೆ ತರುವ ವಿಚಾರದಲ್ಲಿ ಎಷ್ಟರಮಟ್ಟಿಗೆ ಸರ್ಕಾರ ಉಪಯೋಗಿಸುತ್ತಿದೆ ಎಂಬುದು ನನಗೆ ಗೊತ್ತಿಲ್ಲವಾಗಿದೆ ; ಆದ ಕಾರಣ ಈ ನಾನು ವಿಚಾರದಲ್ಲಿ ಪ್ರತ್ಯೇಕವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಈ ಸಚಿವರಿಗೆ ಏನೂ ಒಂದು ಕೆಲಸದ ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆಯೋ ಅದಕ್ಕಿಂತಲೂ ಹೆಚ್ಚಿನ ಒಂದು ಜವಾಬ್ದಾರಿಯನ್ನು ಕೊಟ್ಟು, ಈ ಕೆಲಸವನ್ನು ಜಾಗ್ರತೆ ಮಾಡಿರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಕೆಲಸ ತೀವ್ರಗತಿಯಿಂದ ನಡೆಯುತ್ತಿಲ್ಲವೆಂಬ ಬಗ್ಗೆ ಒಂದೆರಡು ಉದಾಹರಣೆಗಳನ್ನು ಸಹ ಕೊಡಬಲ್ಲೆ ; ಅವೇನೆಂದರೆ, ಈ ಮೊದಲು ಗುಲ್ಬರ್ಗ ಜಿಲ್ಲೆಯಲ್ಲಿ ಅನೇಕ ಮಂದಿ ರೈತರು ಟ್ರಿಬ್ಯುನಲ್ ಮುಂದೆ ಅರ್ಜಿ ಕೊಟ್ಟಿರಲಿಲ್ಲ ; ಕೇವಲ 2 ಸಾವಿರ ಮಂದಿ ಮಾತ್ರ ಕೊಟ್ಟಿದ್ದರು. ನಂತರ ಮಾನ್ಯ ಮುಖ್ಯಮಂತ್ರಿಗಳು, ಕಾಂಗ್ರೆಸ್

ಪಕ್ಷದ ಅಧ್ಯಕ್ಷರು ಮತ್ತು ಮಾನ್ಯ ಕಂದಾಯ ಸಚಿವರು ಅಲ್ಲಿಗೆ ಹೋಗಿ ಒಂದು ದೊಡ್ಡ ಸಭೆ ಮಾಡಿ ರೈತರಿಗೆ ಸೂಕ್ತ ತಿಳುವಳಿಕೆ ಕೊಟ್ಟಮೇಲೆ 50 ಸಾವಿರ ಜನ ರೈತರು ಅರ್ಜಿಕೊಟ್ಟರು; ಈ ಕಾರಣದಿಂದ ನಾನು ಹೇಳುವುದೇನೆಂದರೆ, ಈ ಒಂದು ಕೆಲಸವನ್ನು ನಾವು ಸರ್ಕಾರದ ವತಿಯಿಂದ ಜವಾಬ್ದಾರಿಯುತವಾಗಿ ಮಾಡುವುದಕ್ಕೆ ಹೊರಟಿರುವಾಗ, ಆ ಬಗ್ಗೆ ರಾಜ್ಯದ ಎಲ್ಲಾ ಕಡೆಯೂ ರೈತರಿಗೆ ಸೂಕ್ತ ತಿಳಿವಳಿಕೆ ಕೊಡುವುದು ಅಗತ್ಯವಾಗಿದೆ. ಅದಕ್ಕಾಗಿ ತಪ್ಪ ಪಕ್ಷದವರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡುವುದರ ಜೊತೆಗೆ ಇದಕ್ಕೆ ಬೆಂಬಲ ಕೊಡುವಾ ಇಕರೇ ಪಕ್ಷದ ಜನರನ್ನು ಮತ್ತು ಈ ಶಾಸನಕ್ಕೆ ಬೆಂಬಲ ಕೊಡುತ್ತಿರುವ ನಮ್ಮಂತಹವರನ್ನು ಸೇರಿಸಿ ಕೊಂಡು ಕೆಲಸಮಾಡುವುದು ಅಗತ್ಯವಿದೆ ಮುಖ್ಯವಾಗಿ ಇದು ಜನತೆಯ ಕಾರ್ಯಕ್ರಮವೆಂದು ತಿಳಿದುಕೊಂಡು ಮಾಡಿದರೆ ಅದು ಜಾಗ್ರತೆ ಅನುಷ್ಠಾನದಲ್ಲಿ ಬರಲು ಅವಕಾಶವಾಗುತ್ತದೆ ಇದು ಬಹಳ ವಿರೋಧವನ್ನು ಎದುರಿಸಿಕೊಂಡು ಮಾಡುವ ಕಾರ್ಯವಾದ ಕಾರಣ ಹಳ್ಳಿಗಳಲ್ಲಿರುವ ಪ್ರಗತಿಶೀಲ ಶಕ್ತಿಗಳನ್ನೆಲ್ಲಾ ಒಟ್ಟುಗೂಡಿಸಿಕೊಂಡು ಪಕ್ಷದ ಹಿಂದು ಸಂಕುಚಿತ ಭಾವನೆಯನ್ನು ಬಿಟ್ಟು ಕೆಲಸ ಮಾಡುವುದು ಅಗತ್ಯವಿದೆ ಈ ಬಗ್ಗೆ ಇನ್ನೊಂದು ಉದಾಹರಣೆ ಕೊಡುವುದಾದರೆ ಕೋಲಾರ ಜಿಲ್ಲೆಯಲ್ಲಿ ಕೋರೋ ಎಂಬತಕ್ಕಂಥ ರೈತರಿದ್ದಾರೆ ಅವರು ಅರ್ಜಿ ಕೊಡುವ ವಿಚಾರದಲ್ಲಿ ಬಹಳ ಭಯದಿಂದ ಇದ್ದರು ಆಂತಹ ಒಂದು ಸಂದರ್ಭದಲ್ಲಿ ಆ ರೈತರು ಕೋಲಾರ ಜಿಲ್ಲೆಯಲ್ಲಿ ಒಂದು ಸಮ್ಮೇಳನವನ್ನು ನಡೆಸಿ ತಮ್ಮಿಂದ ಒಂದು ಮಾತನ್ನು ಕೇಳಿ ಈ ಒಂದು ಕಾರ್ಯ ಮಾಡಬೇಕೆದು ಕಾದಿದ್ದರು ಆ ಒಂದು ಸಮಾರಂಭಕ್ಕೆ ಹೋಗಬೇಕಾಗಿದ್ದ ಮಾನ್ಯ ಮಂತ್ರಿಗಳನ್ನು ಕೊನೆಯ ಘಳಿಗೆಯಲ್ಲಿ ತಮ್ಮ ಪಕ್ಷದ ಮುಖಂಡರೊಬ್ಬರೇ ಆಸ್ಪತ್ರೆಗೆ ಹೋಗದಂತೆ ತಡೆದರು ಎಂಬುದು ನನಗೆ ತಿಳಿದುಬಂದಿದೆ ಇದುಸಂದರ್ಭದಲ್ಲಿ ಈ ಕೆಲಸವನ್ನು ನಾವೆಲ್ಲರೂ ಸೇರಿಕೊಂಡು ಪರಸ್ಪರ ಸಹಕಾರದಿಂದ ವರ್ತಿಸಿ ಉತ್ಸಾಹದಿಂದ ಮಾಡಿದರೆ ಮಾತ್ರ ಈ ಕೆಲಸ ಸುಸೂತ್ರವಾಗಿ ಆಗುತ್ತದೆಂದು ಹೇಳುತ್ತೇನೆ ಇದಕ್ಕೆ ಎಲ್ಲರೂ ತಮ್ಮ ಬೆಂಬಲ ಕೊಡುವಿದ್ದರೆ ತೊಡಕು ಬರುತ್ತದೆಂದು ಹೇಳುತ್ತೇನೆ ಕೆಲವರ ಮೇಲೆ ಅರೋಪ ಹೊರಿಸಬೇಕೆಂದು ನಾನು ಈ ಮಾತುಗಳನ್ನು ಹೇಳುತ್ತಿಲ್ಲ ಮುಖ್ಯವಾಗಿ ಕೆಳಮಟ್ಟದಲ್ಲಿ ಅಂದರೆ ಗ್ರಾಮಗಳ ಮಟ್ಟದಲ್ಲಿ ಇದಕ್ಕೆ ಬೆಂಬಲ ಕೊಡುತ್ತಿರುವ ರಾಜಕೀಯ? ಶಕ್ತಿಗಳು ರೈತರ ಪರವಾಗಿ ಕೆಲಸ ಮಾಡಿದ್ದೇ ಅದರೆ ಇದನ್ನು ಯಶಸ್ವಿಯಾಗಿ ಜಾರಿಗೆ ತರಲು ಅವಕಾಶವಾಗುತ್ತದೆಂದು ಹೇಳುತ್ತೇನೆ ಈಗ ಹೊಸದಾಗಿ ರಚನೆ ಮಾಡುವಂತಹ ಟ್ರಿಬ್ಯುನಲ್‌ಗಳಲ್ಲಿ ಶಾಸಕರ ಅವಶ್ಯಕತೆಯಿಲ್ಲದೆ ಕೆಲಸ ಮಾಡುವುದಕ್ಕೆ ಇಲ್ಲಿ ಅವಕಾಶ ಮಾಡಿದ್ದೀರಿ ಈ ಬಗ್ಗೆ ಮಾನ್ಯ ಬಂಗಾರಪ್ಪನವರು ಏನು ಒಂದು ಸೂಚನೆ ಮಾಡಿದರು ಅದಕ್ಕೆ ನಾನು ಬೆಂಬಲಕೊಡುತ್ತೇನೆ. ಈಗ ಶಾಸಕರ ಬದಲು ಬೇರೆ ಸದಸ್ಯರನ್ನು ಆಕೆಲಸ ಮಾಡಲು ತಾವು ನೇಮಕ ಮಾಡಬಹುದು ಅದರೆ ಆಯಾ ತಾಲ್ಲೂಕ್‌ನಲ್ಲಿರುವ ಟ್ರಿಬ್ಯುನಲ್‌ಗಳಲ್ಲಿ ಆಕ್ಷೇತ್ರದ ಶಾಸಕರ ಅವಶ್ಯಕತೆ ಇದ್ದರೆ ಅವರನ್ನು ಎಕ್ಸ್ ಆಫಿಷಿಯೋ ಮೆಂಬರ್ ಎಂದು ನೇಮಕ ಮಾಡುವುದು ಒಳ್ಳೆಯದು ಈಗ ಅಲ್ಲಿ 4 ಜನ ಸದಸ್ಯರಿರುತ್ತಾರೆ; ಅವರ ಜೊತೆಗೆ ಐದನೆಯವರಾಗಿ ಅಲ್ಲಿಯ ಶಾಸಕರೂ ಸಹ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಕೆಲಸಗಳು ಸಮರ್ಪಕವಾಗಿ ನಡೆಯುವುದಕ್ಕೆ ಅವಕಾಶವಿರುತ್ತದೆಂದು ಹೇಳುತ್ತೇನೆ.

ಇನ್ನು ಇಲ್ಲಿ ಸೆಕ್ಷೆನ್ 48 (ಎ)ಗೆ ತಿದ್ದುಪಡಿ ಮಾಡಲಾಗಿದೆ ತಿದ್ದುಪಡಿಯ ಪ್ರಕಾರ 1976ನೆ ಜೂನ್ 30ರವರಿಗೆ ಅರ್ಜಿ ಕೊಡಲು ಅವಕಾಶ ಕೊಟ್ಟಿದ್ದೀರಿ ಅಂದರೆ ಈಮೊದಲು ಕೊಟ್ಟ ಅವಧಿಯನ್ನು ಮುಂದುವರಿಸಿದ್ದೀರಿ ಇದರ ಪ್ರಕಾರ ಹೊಸದಾಗಿ ಅರ್ಜಿ ಸಲ್ಲಿಸುವವರು ಆ ಅರ್ಜಿಯ ಜೊತೆಯಲ್ಲಿ 3 ರೂ 75 ಪೈಸೆ ಸ್ಟ್ಯಾಂಪ್ ಪೇಪರ್‌ನಲ್ಲಿ ಒಂದು ಅಫಿಡವಿಟ್‌ನ್ನು ಸಹ ಲಗತ್ತಿಸಿ ಕೊಡಬೇಕಾಗುತ್ತದೆ ಈ ರೀತಿ ಅಫಿಡವಿಟ್ ತಯಾರಿಸಿ ಕೊಡಲು ವಕೀಲರಿಗೆ ಫೀ ಕೊಡಬೇಕಾಗುತ್ತದೆ ನಂತರ ಅದನ್ನು ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟ್ ಹಾಜರುಪಡಿಸಿ ಅವರ ಸಹಿ ಮಾಡಿಸಿ ನಂತರ ಟ್ರಿಬ್ಯುನರ್ ಮುಂದೆ ಕೊಡಬೇಕಾಗುತ್ತದೆ ಇದು ಬಹಳ ಕಷ್ಟದ ಕೆಲಸ ಈ ಕಷ್ಟವನ್ನು ತಪ್ಪಿಸಬೇಕು ರೈತರು ಅಫಿಡವಿಟ್ಟನ್ನು ನೇರವಾಗಿ ಟ್ರಿಬ್ಯುನಲ್ ಮುಂದೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕು; ಅವನ್ನು ಸ್ವೀಕಾರ ಮಾಡುವಂತಹ ಅಧಿಕಾರವನ್ನು ಟ್ರಿಬ್ಯುನರ್‌ನಲ್ಲಿ ಕೆಲಸ ಮಾಡುವ ಕಾರ್ಯದರ್ಶಿಯವರಿಗಾಗಲೀ ಅಥವಾ ಅಧ್ಯಕ್ಷರಿಗಾಗಲಿ ಕೊಟ್ಟರೆ ಈ ಕೆಲಸವನ್ನು ಸುಲಭವಾಗಿ ಮಾಡಲು ರೈತರಿಗೆ ಸಾಧ್ಯವಾಗುತ್ತದೆ ಅವಕಾರಣ ಈ ಬಗ್ಗೆಯು ಒಂದು ತಿದ್ದುಪಡಿ ಮಾಡಬೇಕೆಂದು ಹೇಳು

ತ್ತೇನೆ ಈಗ ಅರ್ಜಿ ಸಲ್ಲಿಸುವವರು ಕಾಗದದ ಮೇಲೆ 12 ಆಣೆ ಅಥವಾ ಎರಡು ರೂಗಳ ಸ್ಟ್ಯಾಂಪನ್ನು ಅಂಟಿಸಬೇಕಾಗಿದೆ ಈಗ ಸ್ಟ್ಯಾಂಪ್ ಅಂಟಿಸಬೇಕಾಗಿಲ್ಲವೆಂದು ಅದಕ್ಕೆ ರಿಯಾಯಿತಿ ಕೊಟ್ಟಿದ್ದೀರಿ;ಅದೇ ರೀತಿ ಅಫಿಡವಿಟ್‌ನ್ನು ಸಹ ನೇರವಾಗಿ ಟ್ರಿಬ್ಯುನಲ್ ಮುಂದೆಹಾಜರುಪಡಿಸುವುದಕ್ಕೆ ಅನುಮತಿ ಕೊಡ ಬೇಕೆಂದು ಹೇಳ.ತ್ತೇನೆ.

ಇನ್ನು ವಿಧವೆಯರಿಗೆ ಅಪ್ರಾಪ್ತವಯಸ್ಕರಿಗೆ ಅಂಗವಿಕಲರಿಗೆ ಒಂದೇ ಕಂತಿನಲ್ಲಿ ಹಣ ಕೊಡುವುದಕ್ಕೆಇಲ್ಲ ವ್ಯವಸ್ಥೆ ಮಾಡಿದ್ದೀರಿ ಇದು ಬಹಳ ಸೂಕ್ತವಾದುದು ಇದರ ಬಗ್ಗೆ ಹೇಳಬೇಕೆಂ ದರೆ ಬೇರೆ ಎಲ್ಲ. ವರ್ಗದ ಜನರಿಗೂ ಸಹ ಒಂದೇ ಕಂತಿನಲ್ಲಿ ಹಣ ಕೊಡುವ ಬಗ್ಗೆ ತಿದ್ದುಪಡಿ ಮಾಡಿದರೆ ಆದಕ್ಕೆ ಆರ್ಥಿಕ ಸಮಸ್ಯೆಗಳು ಬರಬಹುದೆಂಬ ಕಾರಣದಿಂದ ಇದನ್ನು ಇಷ್ಟಕ್ಕೇ ಸೀಮಿ ತಗೊಳಿಸಿದ್ದಿ ರೆಂದು ನಾನು ತಿಳಿದುಕೊಂಡಿದ್ದೇನೆ ಇದು ಸ್ವಾಗತಾರ್ಹ ವಾದಂಥ ತಿದ್ದುಪಡಿಯಾ ಗಿದೆ ಆದರೆ ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ ಏನೆಂದರೆ ಇಲ್ಲಿ ಮೊದಲು ನಾಲ್ಕಾಣೆರೆ ಪರ್ಸೆಂಟ್ ಎಂದು ಇದ್ದಿದನ್ನು ಐದುವರೆ ಪರ್ಸೆಂಟ್ ಎಂದು ಮಾಡಿದ್ದೀರಿ ಅದರೆ ರ್ಯಾಂಡ್ ಡೆವಲಪ್ ಮೆಂಟ್ ಬ್ಯಾಂಕ್‌ನವರಾಲಿ ರೈತರಿಗೆ ಸಾಲ ಕೊಡುವಾಗ ಐದೂವರೆ ಪರ್ಸೆಂಟ್ ಬಡ್ಡಿಯ ಪ್ರಕಾರ ಕೊಡುವುದಿಲ್ಲ ಇಲ್ಲಿ ಕಂತಿನ ಮೂಲಕ ಕೊಡುವ ಹಣಕ್ಕೆ ಐದೂವರೆ ಪರ್ಸೆಂಟ್ ಬಡ್ಡಿ ಎಂದು ಮಾಡಿ ದ್ದೀರಿ ಆದರೆ ಯಾವ ಬ್ಯಾಂಕಿನವರಾ ರೈತರಿಗೆ ಅದರದಲ್ಲಿ ಸಾಲ ಕೊಡುವುದಿಲ್ಲ 8 ರಿಂದ 11 ಪರ್ಸೆಂಟ್ ಬಡ್ಡಿಕೊಡಬೇಕಾಗುತ್ತದೆ ಇದು ಬಹಳ ಬಾಧಾರಿಯಾಗುತ್ತದೆ ಈ ಅಂಗವಿಕಲರಿಗೆ ವಿಧೆಯರಿಗೆ ಅಪ್ರಾಪ್ತ ವಯಸ್ಕರಿಗೆ ಮತ್ತು ಬುದ್ಧಿಸ್ಥಿಮಿತ ಇಲ್ಲದವರಿಗೆ ಒಂದೇ ಕಂತಿನಲ್ಲಿ ಹಣ ಕೊಡುವುದಕ್ಕೆ ಇಲ್ಲಿ ವ್ಯವಸ್ಥೆ ಮಾಡಿದ್ದೀರಿ ಆದರಂತೆ ಸಂಬಂದಪಟ್ಟ ರೈತರಿಂದ ಒಂದೇ ಕಂತಿನಲ್ಲಿ ಹಣ ವಸೂಲಿ ಮಾಡುತ್ತಿರಿ ಆ ರೈತರು ಬ್ಯಾಂಕ್‌ನಿಂದ ಸಾಲ ಪಡೆದು ಸರ್ಕಾರಕ್ಕೆ ತುಂಬಿಸಬೇಕಾಗುತ್ತದೆ. ಈ ರೀತಿ ಸಾಲ ಪಡೆಯುವ ರೈತರು ಬ್ಯಾಂಕ್‌ಗೆ ದುಬಾರಿ ಬಡ್ಡಿಯನ್ನು ಕೊಡಬೇಕಾಗುತ್ತದೆ ಅಂದರೆ ರೈತರು ಕಂತಿನ ಮೂಲಕ ಹಣ ಕೊಟ್ಟರೆ ಎಪ್ಪು ಬಡ್ಡಿ ಕೊಡಬೇಕಾಗುತ್ತದೆ ಆದಕ್ಕಿಂತ ಜಾಸ್ತಿ ಬಡ್ಡಿ ಕೊಡ ಬೇಕಾಗಿ ಬರುತ್ತದೆ ಆದಕಾರಣ ಈ ವಿಷಯವನ್ನು ಸಹ ಪರಿಶೀಲನೆ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಇನ್ನು ಇದರಲ್ಲಿ ಒಂದು ಅಂಶವನ್ನು ಪರಿಶೀಲನೆ ಮಾಡಬೇಕು ಮತ್ತೆ ಯಾವ ಜಪ್ತಿಯನ್ನು ಟ್ರಬ್ಯು ನಲ್‌ನಲ್ಲಿ ತೀರ್ಮಾನವಾಗಿ ಆತನಿಗೆ ಹಕ್ಕನ್ನು ವಹಿಸಿಕೊಡುವಾಗ ಅಳತೆ ಮಾಡುವ ಫೀಜನ್ನು ಕೊಡ ಬೇಕೆಂದು ನಿಮ ಇದೆ ಇದರ ಬಗ್ಗೆ ಸಂಶಯ ಎತಕ್ಕೆ ಬರುತ್ತದೆ ಎಂದರೆ ನನ್ನ ಅನುಭವದಲ್ಲಿ ಹೇಳು ವುದಾದರೆ ಟ್ರಿಬ್ಯೂನಲ್‌ನಲ್ಲಿ ಏನು ಮಾಡುತ್ತಾರೆ ತೀರ್ಮಾನ ಮಾಡುವಾಗ ಸ್ಥಳವನ್ನು ಪರಿಶೀಲನೆ ಮಾಡಿ ತೀರ್ಮಾನ ಕೊಡುತ್ತಾರೆ ಪರಿಶೀಲನೆಮಾಡುವಾಗಲೇ ಸರ್ವೆಯನ್ನು ಕರೆದುಕೊಂಡು ಹೋಗಿ ಅಳತೆ ಮಾಡಿ ಕೊಡುವುದರಿಂದ ಮತ್ತೆ ಪ್ರತ್ಯೇಕ್ಷ ಫೀಜನ್ನು ಏತಕ್ಕೆ ತೆಗೆದುಕೊಳ್ಳಬೇಕು ಮತ್ತೆ ಅದರ ಅವಶ್ಯಕತೆ ಬರುವುದಿಲ್ಲ ಈ ಕಾನೂನನ್ನು ಜಾಗ್ರತೆ ಜಾರಿಗೊಳಿಸುವುದಕ್ಕೆ ಸಾಧ್ಯವಾ ಗಿರುವುದಕ್ಕೆ ಕಾರಣವಾದರು ತುರ್ತುಪರಿಸ್ಥಿತಿ ಘೋಷಣೆ ಮತ್ತು ಸರ್ಕಾರ ತೆಗೆದುಕೊಂಡ ನಮ ಯಕ್ಕೆ ಸರಿಯಾದ ಕಾರ್ಯಕ್ರಮ ಎಂದು ಹೇಳಬೇಕಾಗಿದೆ ಈಗಲೂ ಕೂಡ ಟ್ರಿಬ್ಯೂನಲ್ ತೀರ್ಮಾನ ವನ್ನು ತಡೆಯುವುದಕ್ಕೆ ಅನೇಕರು ಕೋರ್ಟ್‌ಕಚೇರಿಗಳಿಗೆ ಹೋಗಿ ಆರ್ಡರ್‌ಗಳನ್ನು ತರುವುದಕ್ಕೆ ನೋಡುತ್ತಿದ್ದರು ಇದಕ್ಕೆ ಒಂದು ತಿದ್ದುಪಡಿ ತರುವುದು ಅವಶ್ಯಕತೆ ಇದೆಯೆಂದು ನನಗನಿಸುತ್ತದೆ ಈ ತಮ್ಮ ತಿದ್ದುಪಡಿಯಲ್ಲಿ ಏನಾದಿಫೈನ್ ಮಾಡಿದ್ದಾರೆ ಕೋರ್ಟ್ ಎಂದರೆ ಮುನ್ಸಿಫ್ ಕೋರ್ಟ್ ಎಂದು ವ್ಯಾಖ್ಯಾನ ಮಾಡಿದ್ದಾರೆ ಅದುದರಿಂದ ಟ್ರೆಬ್ಯೂನಲ್ ತೀರ್ಮಾನಿಸುವುದನ್ನು ಈ ಕೋರ್ಟ್‌ಗೆ ಮಾತ್ರ ಬರುವುದಿಲ್ಲ ಹಾಗೂ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೂ ಇದು ಬರುವುದಿಲ್ಲವೆಂದು ತಿಳಿದು ಬೇರೆ ರೀತಿಯಲ್ಲಿ ಆಫೀಲ್ ಜೂರಿಸಡಿಕ್ಷನ್ ಯಾವುದು ಇದೆಯೆಂದು ಇದಕ್ಕೆ ತಡೆಗಳನ್ನು ತರುವುದಕ್ಕೆ ಯೋಚಿಸುತ್ತಿದ್ದಾರೆ ಇದಕ್ಕೆ ಕೋರ್ಟ್‌ನ ವ್ಯಾಖ್ಯೆನ ಮಾಡಿದ್ದಾರೆ ಇದನ್ನು ಪರಿಶೀಲನೆ ಮಾಡಿ ಅಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇನ್ನು ಒಂದು ಆರ್ಡಿನೆನ್ಸ್ ತಿದ್ದುಪಡಿಯಾಗುವ ನಂದರ್ಭದಲ್ಲಿ ಅನೇಕ ವಿಷಯಗಳನ್ನು ಹೇಳಲಿಕ್ಕೆ ಅವಕಾಶ ಇದೆ ಆದರಿಂದ ಈ ಶಾಸನಕ್ಕೆ ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸ.ತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷರೇ, ನಾನು ಈ ಶಾಸನಕ್ಕೆ ಹೃತ್ಪೂರಕವಾಗಿ ಬೆಂಬಲ ನೀಡುತ್ತಾ ಒಂದೇರಡು ವಿಷಯಗಳನ್ನು ಹೇಳಬಯಸುತ್ತೇನೆ. ಸೆಕ್ಷನ್ 48ಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಅದರಲ್ಲಿ ಸಬ್‌ಕ್ಲಾಸ್ (11) ರಲ್ಲಿ ;

"Four others nominated by the State Government of whom at least one shall be a member of the State Legislature. and one shell be a person belonging to the Scheduled Castes....." ಎಂದು ಇದೆ.

At least one shell be a member of the State Legislature ಎಂದು ಏನು ಪದಗಳನ್ನು ಉಪಯೋಗಿಸಿದ್ದರು ಅದನ್ನು ತೆಗೆದುಬಿಟ್ಟಿದ್ದಾರೆ. ಇದನ್ನು ನೋಡಿದರೆ ಒಬ್ಬ ಶಾಸನ ಸಭಾ ಸದಸ್ಯರನ್ನು ಕೈಬಿಟ್ಟು ತೆಗೆದಹಾಗೆ ಆಗುತ್ತದೆ. ಅಡಿಷನಲ್ ಟ್ರೈಬ್ಯುನಲ್ ನೇಮಕ ಮಾಡಿದಾಗ ಶಾಸಕರು ಕಡ್ಡಾಯವಾಗಿ ಟ್ರೈಬ್ಯುನಲ್‌ನಲ್ಲಿ ಇರಬೇಕು ಎಂದು ಇದೆ. ಇನ್ನು ಮೇಲೆ ಯಾವ ಟ್ರೈಬ್ಯುನಲ್‌ನಲ್ಲಿಯೂ ಇರಲೇ ಬೇಕು ಎನ್ನುವ ಕಡ್ಡಾಯ ಇಲ್ಲವೆಂದು ಈ ತಿದ್ದುಪಡಿಯನ್ನು ತಂದಿದ್ದಾರೆಯೆ ಹೇಗೆ ಎನ್ನುವುದು ನನಗೆ ಗೊತ್ತಾಗುವುದಿಲ್ಲ ನಾವು ಏನು ಹಿಂದೆ ಶಾಸನ ಮಾಡಿದ್ದೆವೋ ಅದರಲ್ಲಿ ಶಾಸಕರು ಇರಲೇ ಬೇಕು ಎಂದು ಮೂಲತಃ ಏನು ತೀರ್ಮಾನ ಮಾಡಿದ್ದೇವೆ ಅಭಿಪ್ರಾಯ ಇದರಲ್ಲಿ ಇದೆಯೋ ಇಲ್ಲವೋ ನನಗೆ ಗೊತ್ತಾಗಲಿಲ್ಲ ಅಡಿಷನಲ್ ಟ್ರೈಬ್ಯುನಲ್ ಆಗುವುದರಿಂದ ಈಗ ಇರುವಂತೆ ಶಾಸಕರು ಇರಲೇ ಬೇಕೆಂಬ ಕಡ್ಡಾಯವಿಲ್ಲ ಎನ್ನುವರೀತಿಯಲ್ಲಿ ಇದನ್ನು ರಚನೆ ಮಾಡಬೇಕೆಂದು ತಿದ್ದುಪಡಿ ಮಾಡಿರುವ ರೀತಿಯಲ್ಲಿನೆ ಎಂಬುದು ನನ್ನ ಅಭಿಪ್ರಾಯ ಇದು ಹಿಂದೆ ಮಾಡಿರತಕ್ಕಂಥ ತತ್ವಕ್ಕೆ ವ್ಯತ್ಯಾಸ ಉಂಟಾಗುತ್ತದೆ ಆದರಿಂದ ನಟಿವರು ಇದರ ಬಗ್ಗೆ ವಿವರಣೆಯನ್ನು ನೀಡಿದರೆ ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ.ಆರ್.ಶಾಮಣ್ಣ (ಕೋಚೆ).—ಮಾನ್ಯ ಸಭಾಪತಿಗಳೇ, ಈಗಾಗಲೇ ಭೂಸುಧಾರಣೆ ಕಾಯ್ದೆ ಜಾರಿಗೆ ಬಂದಿರುವುದರಿಂದ ಇದನ್ನು ವಿರೋಧಿಸುವ ಪ್ರಸಂಗ ಒದಗುವುದಿಲ್ಲ. ಆದರೆ ಈಗ ತಂದಿರತಕ್ಕ ತಿದ್ದುಪಡಿ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಲೆಜಿಸ್ಲೇಟರ್ಸ್ ಎಲ್ಲಾ ಟ್ರೈಬ್ಯುನಲ್‌ನಲ್ಲಿ ಇರುವುದಕ್ಕೆ ಸಾಧ್ಯವಿಲ್ಲದೆ ಇರುವುದಕ್ಕೆ ಇನ್ನು ಹೆಚ್ಚಿನ ಟ್ರೈಬ್ಯುನಲ್ ಮಾಡುವ ಅಭಿಪ್ರಾಯ ಇರುವುದರಿಂದ ಇದರ ಬಗ್ಗೆ ಹೇಳುವ ಹಾಗಿಲ್ಲ. ಆದರೆ ಅವಶ್ಯಕತೆ ಇದ್ದರೂ ಕೂಡ ರಾಜಕೀಯವಾಗಿ ಇದನ್ನು ಉಪಯೋಗಿಸಕೊಳ್ಳಕೂಡದು ಜೊತೆಗೆ ಅನೇಕ ಶಾಸಕರನ್ನು ಒಂದಕ್ಕೆ ಆಥವಾ ಎರಡಕ್ಕೂ ಹೆಚ್ಚಿನ ಕಡೆ ಕೆಲವು ಸದಸ್ಯರನ್ನು ಹಾಕುವುದು ಸರಿಯಲ್ಲ.ಅಲ್ಲಿ ಇರತಕ್ಕ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಬೇಕೆ ಹೊರತು ನಮ್ಮ ಪಕ್ಷವನ್ನು ಬೆಳೆಸುವುದಕ್ಕೆ ಇದನ್ನು ಮಾಡಬೇಡಿ. ಎಷ್ಟೋ ಕಡೆ 200-300 ಜನರು ಟ್ರಿಬ್ಯೂನಲ್‌ಗೆ ಬಂದು ಅಲ್ಲಿ ಸದಸ್ಯರು ಬರದೆ ಇರುವುದರಿಂದ ಟ್ರೈಬ್ಯುನಲ್ ನಡೆಯದೆ ಅಡ್‌ಜರ್ನ್‌ಮೆಂಟ್ ಮಾಡಿ ಜನರಿಗೆ ತೊಂದರೆಯಾಗಿರುವುದು ಬಹಳ ನಿದರ್ಶನಗಳು ಇವೆ. ಜನಗಳು ಈ ರೀತಿ ಬಂದು ವಾಪಸ್ ಹೋಗುವುದು ಸರಿಯಾದುದಲ್ಲ. ಉದಾಹರಣೆಗೆ ಮಂಡ್ಯಜಿಲ್ಲೆಯಲ್ಲಿ,ಮದ್ದೂರುತಾಲ್ಲೂಕನಲ್ಲಿ ಅನೇಕ ಸಾರಿ ಈ ರೀತಿಆಗಿವೆ ಜೊತೆಗೆ ಇನ್ನೂ ಅನೇಕ ಕಡೆಗಳಲ್ಲಿ ಜನರಿಗೆ ಬಹಳ ಕಿರುಕುಳ ಆಗುತ್ತಾ ಇದೆ. ಇದನ್ನು ತಪ್ಪಿಸಬೇಕೆಂದು ಒತ್ತಿ ಹೇಳುತ್ತೇನೆ. ಇನ್ನು ಕೆಲವು ಕಡೆ ನ್ಯಾಯಕ್ಕಿಂತ ಅನ್ಯಾಯವೇ ಜಾಸ್ತಿಯಾಗಿದೆ ಎಂದು ಹಣಕ್ಕೆ ಬೆಂಬಲ ಜಾಸ್ತಿಯಾಗಿದೆ. ಕೆಲವು ಭೂಮಾಲೀಕರಿಗೆಅನ್ಯಾಯವಾಗಿದೆ ಕೆಲವು ಕಡೆ ಟೆನೆಂಟ್‌ಗಳಿಗೆ ಅನ್ಯಾಯವಾಗಿದೆ. ಕೆಲವು ಜೀನಾಮಿ ವ ನುಷ್ಯರು ನಾನು ಜಮೀನನ್ನು ಮಾಡುತ್ತಿದ್ದೆ ಎಂದು ಸುಳ್ಳು ಹೇಳಿ ಜಮೀನು ಪಡೆದಿರುವ ನಿದರ್ಶನಗಳು ಇವೆ. ಎಲ್ಲೂ ಕೂಲಿನಾಲಿ ಮಾಡಿ ಜೀವನುತ್ತಿದ್ದು ಇದ್ದವಕ್ಕಿದ್ದಹಾಗೆ ನಾನು ಜಮೀನು ಮಾಡುತ್ತಿದ್ದೆ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಆ ರೀತಿ ಅನೇಕ ತಕರಾರು ಅರ್ಜಿಗಳು ಬಂದಿವೆಯೆಂದು ಕೇಳಿದ್ದೇನೆ. ಇದಕ್ಕೂ ಕೂಡ ಅವಕಾಶ ಕೊಡದಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ.

6-00 P.M.

ಅದಕ್ಕೂ ಕೂಡ ಅವಕಾಶ ಕೊಡದ ಹಾಗೆ ನೋಡಬೇಕು. 1974ರಲ್ಲಿ ಭೂಸುಧಾರಣೆ ಜಾರಿಗೆ ಬಂದರೂ ಕೂಡ ಕೋದವರ್ಷ ಇದಕ್ಕೆ ಸಂಬಂದಪಟ್ಟ ಕಂದಾಯ ಏನಿತ್ತೋ ಅದು ಕೂಡ ಸರ್ಕಾರಕ್ಕೆ ಬಂದಿಲ್ಲ. ಪಾಲಿಕ್ಯಾನಿಗೂ ಅದರಿಂದೇನೂ ಉಪಯೋಗವಾಗಲಿಲ್ಲ. ಆ ರೀತಿಯಾದಂಥ ಒಂದು ವರ್ಷದ ಭೂಕಂದಾಯ ಇದುವರೆಗೂ ವಸೂಲು ಮಾಡದೇ ಇರುವ ಬಗ್ಗೆ ಏನು

ಯೋಚನೆ ಮಾಡತ್ತೀರೆಂಬುದನ್ನು ಹೇಳಬೇಕು. ಇದರ ಜೊತೆಗೆ ವಾಟರ್‌ರೇಟ್ ಕೊಡುವ ಪ್ರಶ್ನೆ ಬೇರೆ ಇದೆ. ಹಿಂದೆ ಭೂಮಾಲೀಕ ಆಗಿದ್ದವನು ಇದನ್ನು ಕೊಡಬೇಕೇ ಅಥವಾ ಗೇಣಿದಾರ ಕೊಡಬೇಕೇ ಎಂಬ ಬಗ್ಗೆ ಇನ್ನೂ ತಕರಾರು ಇದೆ. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಈಗ ಶೇಕಡ 4½ ಇದ್ದುದನ್ನು ಶೇಕಡ 5½ಕ್ಕೆ ಏರಿಸಿದೆ. ಬ್ಯಾಂಕುಗಳಲ್ಲಿ ಶೇಕಡ 18ರಷ್ಟು ಇರುವಕಡೆ ಇಲ್ಲಿ ಶೇಕಡ 5½ಯಷ್ಟು ಮಾಡಿದ್ದೇವೆಂದು ಹೇಳಿದ್ದಾರೆ. ಇದನ್ನು ನಾನು ಒಪ್ಪುವುದಿಲ್ಲ. ಆಲ್ಟಿಮೇಟಾಗಿ ಮಾನ್ಯ ಸಚಿವರು ಹೇಳಿದಂತೆ ಈ ಬೆಲ್ಲಿನಲ್ಲಿ ವಿವರಣೆ ಕೊಟ್ಟಹಾಗೆ ಅಂಗಬಿಕಲರು, ವಿಧವೆಯರು ಮತ್ತು ಮೈನರ್ ಹಾಗೂ ಸ್ಮಾಲ್ ಹೋಲ್ಡರ್‌ಗಳಿಗೆ ವಿನಾಯಿತಿ ಕೊಡುತ್ತೇವೆಂದು ಬಾಯಲ್ಲಿ ಹೇಳುತ್ತಾರೆ. ಅದರ ಬಗ್ಗೆ ಈ ಮಸೂದೆಯಲ್ಲಿ ಒಂದೇ ಪೊತ್ತದಲ್ಲಿ ದುಡ್ಡು ಕೊಡುವ ಅಂಶ ಇಲ್ಲದೇ ಇರುವುದರಿಂದ ಸ್ಮಾಲ್ ಹೋಲ್ಡರ್ಸ್‌ನನ್ನು ಸಹ ಇದರಲ್ಲಿ ಬಹು ಮುಖ್ಯವಾಗಿ ಸೇರಿಸಬೇಕು. ಇಲ್ಲದೇ ಹೋದರೆ, ಭೂಮಿಯನ್ನೇ ನಂಬಿಕೊಂಡಿರತಕ್ಕವರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸಣ್ಣ ಮಾಲೀಕರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಅವರಿಗೆ ಪರಿಹಾರಧನವನ್ನು ಒಟ್ಟಿಗೆ ಕೊಟ್ಟರೆ ಮಾನ್ಯ ಸಚಿವರು ಹೇಳಿದಹಾಗೆ ಅವರು ಮುಂದೆ ವ್ಯಾಪಾರ ಮಾಡುವುದಕ್ಕೆ ಅನುಕೂಲವಾಗುತ್ತದೆ ದೆಂದು ನಾನು ಒತ್ತಾಯಪೂರ್ವಕವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

1961ರಿಂದ ಆಗಿರತಕ್ಕ ಭೂಮಿಯ ವಿತರಣೆ ಎನ್ನೇನಿದೆಯೋ ಅದರ ಬಗ್ಗೆ 1961ರಿಂದಲೇ ರಿಟ್ರಾಸ್ಪೆಕ್ಟಿವ್ ಆಗಿ ಜಾರಿಗೆ ತರಬೇಕೆಂಬ ನಿಯಮವಿದೆ. ಇದರಲ್ಲಿ ಒಂದುಲೋಪ. ಎಷ್ಟೋ ಜನರು ಅವರಲ್ಲಿ ಸತ್ತವರು ಇದ್ದಾರೆ. ಸಚಿವರು ಆಗಲೇ ದುಡ್ಡು ತೆಗೆದುಕೊಂಡು ಅದನ್ನೆಲ್ಲಾ ಉಪಯೋಗಿಸಿ ಈಗ ಮೂರು ಕಾಸು ಸಹ ಇಲ್ಲದೇ ಇರುವವರೂ ಇದ್ದಾರೆ. ಜಮೀನು ಕೊಂಡಿರುವವರೂ, ಭೂಮಿಇನ್ನೂ ಮಾಡುತ್ತಾ ಇರತಕ್ಕ ರೈತರೂ ಅನೇಕ ಮಂದಿ ಈಗ ಇದ್ದಾರೆ. ಇನ್ನು ಅಂತಹವರ ದುಡ್ಡನ್ನು ತೆಗೆದುಕೊಂಡು ಅನುಭವಿಸಿರುವವರು ಈಗ ಲೆಕ್ಕಕ್ಕೆ ಬರುವುದಿಲ್ಲ ಇದರಿಂದ ಯಾರು ನಿಜವಾಗಿ ಭೂಮಿ ಮಾಡುತ್ತಿದ್ದಾನೋ ಅಂತಹವರಿಗೆ ಬಹಳ ತೊಂದರೆಯಾಗುತ್ತಿದೆ. ಇದರಲ್ಲಿ ಇನ್ನು ಮಾಲೀಕರ ಪ್ರಶ್ನೆ ಬೇರೆ. ಒಂದು ವೇಳೆ ಮನೆಯಲ್ಲಿ ಅಣ್ಣತಮ್ಮಂದಿರ ಭೂಮಿ ಹಂಚಿಕೆ ಆಗಿದ್ದರೆ ಅದನ್ನೂ ಕೂಡ ಲೆಕ್ಕಕ್ಕೆ ತೆಗೆದುಕೊಂಡು ಬರಬೇಕೆಂದು ಅವರು ಹೇಳುತ್ತಾರೆ.

ಕೊನೆಯದಾಗಿ ಒಂದು ಮಾತು: ಯಾವತ್ತೂ ಗೇಣಿದಾರರಿಗೆ ಕೊಟ್ಟ ಸಾಲ ಖಂಡಿತವಾಗಿ ಬರುವುದಿಲ್ಲ. ಈಗಾಗಲೇ ಅವರಿಗೆ ಡೆಟ್ ರಿಲೀಫ್ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಇನ್ನು ಮುಂದೆ ಸಣ್ಣ ಹಿಡುವಳಿದಾರರಿಗೂ ಕೊಡಬೇಕಾದುದು ಇಲ್ಲವೆಂದು ಹೇಳಿದರೆ ಹೇಗೆ? ರೈತನಾದವನು ಕಂದಾಯದ ಜೊತೆಗೆ ಬಡ್ಡಿ ಬೇರೆ ಹೆಚ್ಚಿಗೆ ಕೊಡಬೇಕಾದ ಪ್ರಸಂಗಗಳಿವೆ. ಈಗಾಗಲೇ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಬಡವರ ಕಲ್ಯಾಣಕ್ಕಾಗಿ ಖರ್ಚು ಮಾಡುತ್ತಿರುವಾಗ ಸಣ್ಣ ಹಿಡುವಳಿದಾರರಿಗೆ ಒಂದೇಸಾರಿ ಮೊತ್ತವನ್ನು ಕೊಡುವುದಾದರೆ ಬಹಳ ಉಕ್ತಮವಾಗುತ್ತದೆ. ಆ ರೀತಿ ಮಾಡದೆ ಸುಮ್ಮನೆ ಸಾಲದ ಹೊರೆಯನ್ನು ರೈತರ ಮೇಲೆ ಹೊರಿಸಿದರೆ ಖಂಡಿತವಾಗಿ ಹಣ ವಾಪಸ್ಸು ಬರುವುದಿಲ್ಲ. ಅದು ಯಾವತ್ತೂ ಬರುವುದಿಲ್ಲ. ಆದ್ದರಿಂದ ಅದನ್ನು ರೈಟ್ ಆಫ್ ಮಾಡುವುದಕ್ಕೆ ಬದಲಾಗಿ ಇವತ್ತು ನಾನು ಸೂಚನೆ ಮಾಡಿದಂತೆ ಮಾಡುವುದು ಒಳ್ಳೆಯದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯಮಂತ್ರಿಗಳು ತಂದಿರುವ ತಿದ್ದುಪಡಿಯ ಮಸೂದೆಯನ್ನು ಸ್ವಾಗತಿಸಿ ಒಂದೆರಡು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾಲ್ಕು ಜನರ ಲ್ಯಾಂಡ್ ಟ್ರಿಬ್ಯೂನಲ್ ಕಮಿಟಿಗಳಲ್ಲಿ ಕೆಲವರು ಸದಸ್ಯರುಗಳಲ್ಲ ಅವರ ಪಕ್ಷದವರನ್ನೇ ಹಾಕಿದ್ದಾರೆ. ನನ್ನ ಅನುಭವದ ಪ್ರಕಾರ ಒಳ್ಳೆಯವರು ಇದ್ದು ಅವರು ಯೋಗ್ಯ ರೀತಿಯಲ್ಲಿ ಕೆಲಸ ಮಾಡಿದರೆ ಉತ್ತಮ. ಆದರೆ ಕೆಲವು ಕಡೆಗಳಲ್ಲಿ ಇಂಪಾರ್ಷಿಯಲ್‌ರಾಗಿ ಇರುವವರು ಇಲ್ಲದೆ ಯದ್ವಾತದ್ವಾ ತುಂಬಿಕೊಂಡಿದ್ದಾರೆ.

ಶ್ರೀ ಕೆ. ಬಿ. ಶಿವಯ್ಯ.—ಪ್ರತಿಯೊಂದು ಕಡೆಯಲ್ಲಿಯೂ ಎಷ್ಟೆಷ್ಟು ಸಾಧ್ಯವೋ ಅಷ್ಟೆಷ್ಟು ಕಾನೂನುನಿಗನುಸಾರವಾಗಿ ಆ ಕಮಿಟಿಗಳಲ್ಲಿ ತೆಗೆದುಕೊಂಡಿದ್ದಾರೆ. ಎಷ್ಟೋ ಕಡೆಗಳಲ್ಲಿ ಲ್ಯಾಂಡ್ ಲಾರ್ಡ್ಸ್ ಪರವಾಗಿಯೂ ಮತ್ತು ಟೆನೆಂಟ್ಸ್ ಪರವಾಗಿಯೂ ಆ ಕಮಿಟಿಗಳಲ್ಲರತಕ್ಕ ಸದಸ್ಯರುವಾದ ಮಾಡಿರುವುದೂ ಉಂಟು. ಆ ಕಮಿಟಿಗಳಲ್ಲಿ ನಮ್ಮ ಪಕ್ಷ, ನಿಮ್ಮ ಪಕ್ಷ ಎಂಬ ಭೇದಭಾವ ಇಲ್ಲ. ಅನೇಕ ವಿಷಯಗಳಲ್ಲಿ ಲ್ಯಾಂಡ್‌ಲಾರ್ಡ್ಸ್ ಪರವಾಗಿಯೂ ಟೆನೆಂಟ್‌ಗಳ ಪರವಾಗಿಯೂ ದುಡ್ಡು

ಹೊಡೆದಿರುವಪ್ರಸಂಗಗಳು ಇವೆ. ಆದರೆ ಮಾನ್ಯ ಸದಸ್ಯರು ಸ್ಪೆಸಿಫಿಕ್ಕಾಗಿ ಏನಾದರೂ ಇನ್‌ಸ್ಟೆನ್ಸ್ ಇದ್ದರೆ ಅದನ್ನು ತಿಳಿಸಿದರೆ, ಅದರ ಬಗ್ಗೆ ಏನು ಆರೋಪಣೆ ಮಾಡಿದರೂ ಅದನ್ನು ವಿಚಾರಣೆ ಮಾಡಬಹುದು. ಅದನ್ನು ಬಿಟ್ಟು ಹೊರಗಡೆ ಏನೇನು ನಡೆಯುತ್ತದೋ ಅದೆಲ್ಲವನ್ನೂ ಈ ಸಭೆಯೊಳಗೆ ಹೇಳುವುದು ಸಾಧ್ಯವಾದುದಲ್ಲ.

ಶ್ರೀ ಎಂ. ಎಸ್. ಕೃಷ್ಣನ್ — ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಅದನ್ನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಬಡವರ ಬಗ್ಗೆ ಕನಿಕರ ಇಟ್ಟುಕೊಂಡಿರುವವರು ಆಪಕ್ಷದಲ್ಲಿಯೂ ಇದ್ದಾರೆ. ಅಂತಹವರಿಗೆ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಮೊದಲು ನಾನು ಹೇಳಿದಹಾಗೆ ಅನೇಕ ಕಡೆಗಳಲ್ಲಿ ಟೆನೆಂಟ್ಸ್ ಕಡೆಯಿಂದಲೂ ಮತ್ತು ಲ್ಯಾಂಡ್ ಲಾರ್ಡ್ಸ್ ಕಡೆಯಿಂದಲೂ ಅನೇಕರು ದುಡ್ಡು ಹೊಡೆಯುತ್ತಿದ್ದಾರೆ. ಅನೇಕ ನಿದರ್ಶನಗಳನ್ನು ಈಗಾಗಲೇ ಮಂತ್ರಿಗಳ ಗಮನಕ್ಕೂ ಮತ್ತು ಅಧಿಕಾರಿಗಳ ಗಮನಕ್ಕೂ ಸಹ ನಾನು ತಂದಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಇನ್ನು ಮುಂದೆ ಹೊಸ ಟ್ರಿಬ್ಯೂನರ್‌ಗಳನ್ನು ರಚನೆ ಮಾಡುವಾಗ ಕೂನೆಯ ಪಕ್ಷ 3 ಜನರನ್ನಾದರೂ ಅಲ್ಲಿ ಹಾಕಿ. ನಿಮ್ಮ ಪಕ್ಷದಲ್ಲಿ ಇಲ್ಲದೇ ಇರುವವರನ್ನೂ ಆದರಲ್ಲಿ ಸೇರಿಸಿ ಇದರ ಬಗ್ಗೆ ವಿರೋಧಪಕ್ಷದವರು ಇಂಬಾರದೆಂದು ಹೇಳಿ ಅವರೊಡನೆ ವ್ಯವಹಾರ ಮಾಡಬಾರದೆಂದೇನೂ ಇಲ್ಲ. ಹಾಗೆ ಮಾಡಿದರೂ ಮುತುವರ್ಜಿಯಾಗಿ ಮಾಡಬೇಕೆಂದು ನಿಮ್ಮ ಭಾವನೆ ಮೂಡುತ್ತಿದೆಯೆಂದು ನನಗೆ ಕಾಣುತ್ತದೆ. ಆ ದೃಷ್ಟಿಯಿಂದ ಮಾಡಿ. ಇನ್ನು ಅಡಿಷನಲ್ ಟ್ರಿಬ್ಯೂನರ್ ರಚನೆ ಮಾಡುವಾಗ ನಿಮ್ಮ ಪಕ್ಷದವರನ್ನು ಹಾಕಿದರೂ ಕೂನೆಯ ಪಕ್ಷ ಒಬ್ಬರನ್ನಾದರೂ ಬೇರೆ ಪಕ್ಷದವರನ್ನು ಆದರಲ್ಲಿ ಹಾಕಿಯೆಂಬುದಾಗಿ ನಾನು ಸಲಹೆ ಮಾಡುತ್ತೇನೆ. ಏಕೆಂದರೆ ನನಗೆ ತಿಳಿದಹಾಗೆ ಅಲ್ಲಿ ಅನೀತಿ, ಅನ್ಯಾಯಗಳೇ ಅಲ್ಲಿ ಹೆಚ್ಚು. ದೇವಸ್ಥಾನದ ಜಮೀನುಗಳನ್ನು ಗುತ್ತಿಗೆಗೆ ತೆಗೆದುಕೊಳ್ಳುವಾಗ ಇನಾಂ ಅಬಾಲಿಷನ್ ಆಫೀಸಿಗೆ ಹೋದರೆ ಆ ವಿಚಾರಕ್ಕಾಗಿ ಕೊಟ್ಟಿರತಕ್ಕ ಆರ್ಜಿ ಒಬ್ಬರಿಂದ ಒಬ್ಬರಿಗೆ ಹೋಗಿ ಬರುವಷ್ಟರಲ್ಲಿ ಅದು ಹತ್ತಾರು ಜನರಕೈಮುಟ್ಟಿ ಜಮೀನು ಕೊಂಡುಕೊಳ್ಳುವುದಕ್ಕೆ ನಾನಾ ವಿಧವಾದ ತೊಂದರೆಗಳುಂಟಾಗಿ ಅಲ್ಲಿ ಅನೀತಿ ಅವ್ಯವಹಾರಗಳು ಹೆಚ್ಚಿಗೆ ನಡೆಯುತ್ತಾ ಇವೆ. ಆದುದರಿಂದ ನಾನು ಸಲಹೆ ಮಾಡುತ್ತೇನೆ ತಾವು ಲ್ಯಾಂಡ್ ಟ್ರಿಬ್ಯೂನರ್‌ಗಳನ್ನು ಏನು ಹೆಚ್ಚಿಗೆ ರಚನೆ ಮಾಡುತ್ತೀರಿ ಅದರಲ್ಲಿ ಶಾಸನಕರನ್ನೂ ಹಾಕಬೇಕು. ಹಾಗೆ ಮಾಡದೇ ಬರೀ ಅಧಿಕಾರಿಗಳನ್ನು ಮಾತ್ರ ನೇಮಕ ಮಾಡಿದರೆ ಅನ್ಯಾಯ ಮಾಡಿದರ ಹಾಗೆ ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ದೇಶದಲ್ಲಿ ನ್ಯಾಯವಾದ ಕ್ರಾಂತಿ ಆಗಬೇಕೆಂದು ಹೇಳುತ್ತೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಈ ಬಡವರಿಗೆ, ದೀನ ದಲಿತರಿಗೆ ಒಳ್ಳೆಯದು ಆಗಬೇಕೆಂದು ಹೇಳುತ್ತೀರಿ ಅದರೆ ಅವರಿಗೆ ತಾವು ಪರಿಹಾರ ಧನವನ್ನು ಒಂದೇ ಕಂತಿನಲ್ಲಿ ಕೊಡಿಸಿಕೊಡುವ ಹಾಗೆ ವ್ಯವಸ್ಥೆ ಮೊದಲು ಮಾಡಿ, ಅವರು 20 ಕಂತುಗಳಲ್ಲಿ ಪರಿಹಾರ ಧನ ಕೊಡುತ್ತೇವೆಂದು ಚೀಟಿಯನ್ನು ಕೊಟ್ಟರೆ ಅವರು ನೋಡಿಕೊಳ್ಳುತ್ತಾ ಕುಳಿತರೆ ಹೊಟ್ಟೆ ತುಂಬುವುದಿಲ್ಲ ಅವರು ಯಾವುದೇ ತರಹದ ವ್ಯವಹಾರವನ್ನೂ ಸಹ ಮಾಡುವುದಕ್ಕಾಗುವುದಿಲ್ಲ. ತುಂಬಾ ಶ್ರೀಮಂತರ ಬಗ್ಗೆ ನಾನು ಮಾತನಾಡುತ್ತಾ ಇಲ್ಲ. ಕನಿಷ್ಟ ಜೀವನ ನಡೆಸುವುದಕ್ಕೂ ತೊಂದರೆಯಾಗುವಂಥವರಿಗೆ ತಾವು ಒಂದೇ ಗಂಟಿನಲ್ಲಿ ಪರಿಹಾರ ಧನವನ್ನು ಕೊಡಿಸಿ ಕೊಟ್ಟರೆ ಅವರು ಬೇರೆ ಯಾವುವಾದರೂ ವ್ಯವಹಾರವನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ. ತಾವು ವಿಧವೆಯರಿಗೆ, ಅಂಗವಿಕಲರಿಗೆ ಇಂಥವರಿಗೆ ಒಂದೇ ಗಂಟಿನಲ್ಲಿ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಮಾಡಿದ್ದೀರಿ ಅದರೆ ನಾನು ಹೇಳುತ್ತಿರುವುದು ಶ್ರೀಮಂತರು ಆಲ್ಲದೇ ಇರತಕ್ಕಂಥವರಿಗೂ ಸಹ ಒಂದೇ ಗಂಟಿನಲ್ಲಿ ಪರಿಹಾರ ಧನವನ್ನು ಒಡಗಿಸಿ ಕೊಡುವ ವ್ಯವಸ್ಥೆ ಮಾಡಿ ಎಂದು. ತಾವು ಈಗ ಮಾಡಿರತಕ್ಕಂಥ ಕಾರ್ಯ ತುಂಬಾ ಶ್ಲಾಘನೀಯವಾದುದು. ಸ್ವಾಮಿ. ಈ ಭೂ ನ್ಯಾಯ ಮಂಡಲಗಳು ಪ್ರಾರಂಭವಾಗಿ ಒಂದು ಒಂದೂವರೆ ವರ್ಷವಾಯಿತು ಇನ್ನೂ ಪರಿಹಾರ ಧನವನ್ನು ಕೂಡ ಅವರಿಗೆ ಕೊಟ್ಟಿಲ್ಲ. ಪೊಡರಾಗಿದ್ದರೆ ಅವರು ಪಾರಕ್ಕೂ, ಗುತ್ತಿಗೆಗೋ ಕೊಟ್ಟು ಅದರಿಂದ ಬಂತಕ್ಕಂಥ ಆದಾಯದಿಂದ ಜೀವನ ಮಾಡುತ್ತಿದ್ದರು. ತಾವು ಕಾನೂನನ್ನು ಜಾರಿಗೆ ತಂದ ಮೇಲೆ ಅವರಿಗೆ ಜೀವನ ಮಾಡುವುದಕ್ಕೇ ಬಹಳ ಕಷ್ಟವಾಗಿದೆ ಆದುದರಿಂದ ತಾವು ಆದಷ್ಟು ಬೇಗ ದುಡ್ಡನ್ನು ಕೊಡಿಸಿಕೊಡುವ ಬಗ್ಗೆ ವ್ಯವಸ್ಥೆ ಮಾಡಿ. ಪರಿಹಾರ ಧನವನ್ನು 20 ವರ್ಷಗಳ ಕಂತಿನಲ್ಲಿ ಕೊಡುತ್ತೇವೆ ಹಾಗೂ ಅದಕ್ಕೆ ಬಡ್ಡಿ ಶೇಕಡ 5½ನಂತೆ

ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ನ್ಯಾಷನ್‌ಲೈಜ್ ಬ್ಯಾಂಕುಗಳಲ್ಲಿ 13-20 ಪರ್ಸೆಂಟ್‌ನಷ್ಟೆ ಬಡ್ಡಿ ಕೊಡುತ್ತಿರುವಾಗ ಕೇವಲ ನಾಲ್ಕುವರೆ, ಐದುವರೆ ಪರ್ಸೆಂಟ್ ಕೊಡುತ್ತೇವೆಂದು ಹೇಳುವುದು ಸೂಕ್ತವಲ್ಲ, ಬೇರೆಯವರು ಹೇಗೆ ಇಂಟ್ರೆಸ್ಟ್ ಕೊಡುತ್ತಾರೋ ಹಾಗೆ ಇವರಿಗೂ ನ್ಯಾಯವಾದಂಥ ಬಡ್ಡಿಯನ್ನು ಕೊಡಿಸಿಕೊಡುವುದಕ್ಕೆ ಪ್ರಯತ್ನಪಟ್ಟು ಏರ್ಪಾಡ ಮಾಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಎನ್. ಎಸ್. ಗುರುಸಿದ್ದಪ್ಪ ಬಿಳಿಗೆರೆ).— ಮಾನ್ಯ ಅಧ್ಯಕ್ಷರೇ, ನಮ್ಮ ಕಂದಾಯ ಮಂತ್ರಿಗಳು ತಂದಿರತಕ್ಕಂಥ ತಿದ್ದುಪಡಿಯ ಮೇಲೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಡಿಷನಲ್ ಟ್ರಿಬ್ಯೂನಲ್‌ಗಳಲ್ಲಿ ವಿಧ್ಯಾವಂತರಿಗೂ, ಅನುಭವಸ್ಥರಿಗೂ ಜಾಗ ಮಾಡಿ ಕೊಡಬೇಕೆಂದು ನಾನು ಮೊದಲನೆಯದಾಗಿ ಹೇಳಬಯಸುತ್ತೇನೆ. ಅನೇಕ ಸಂದರ್ಭದಲ್ಲಿ ಡಾಕ್ಯುಮೆಂಟ್ಸ್‌ಗಳನ್ನು ನೋಡಬೇಕಾಗುತ್ತದೆ, ವಿಚಾರ ಮಾಡ ಬೇಕಾಗುತ್ತದೆ, ಅನುಭವವಿಲ್ಲದೇ ಇರುವವರು ಡಾಕ್ಯುಮೆಂಟ್ಸ್‌ಗಳನ್ನು ವಿಚಾರ ಮಾಡಿದೆ ಇದ್ದಂಥ ಸಂದರ್ಭಗಳಲ್ಲಿ ಬಹಳ ತೊಂದರೆಯಾಗುತ್ತದೆ.

ಇನ್ನು ತಾವು ಡಿಕ್ಲರೇಷನ್ ಕೊಡಲು ಚೈಮನ್ನು ಎಕ್ಸ್‌ಟೆಂಡ್ ಮಾಡಿದ್ದೀರಿ ಇದು ಬಹಳ ಒಳ್ಳೆಯದು. ಏತಕ್ಕೆಂದರೆ ಕೆಲವರು ಕಾರಣಾಂತರಗಳಿಂದ ಮರೆತು ಬಿಟ್ಟಿರ ಬಹುದು, ಇಲ್ಲವೇ ಉದಾಸೀನ ಮಾಡಿರಬಹುದು ಅಂಥವರಿಗೆ ಇದರಿಂದ ತುಂಬಾ ಅನುಕೂಲವಾಗುತ್ತದೆ. ಇನ್ನು ಪರಿಹಾರಧನದ ವಿಷಯವಾಗಿ ಹೇಳುವುದಾದರೆ, ಗೇಣಿದಾರರಲ್ಲಿ ಬಡವರೂ ಇವ್ವಾರೆ, ಶ್ರೀಮಂತರೂ ಇವ್ವಾರೆ. ಅಂಥ ಶ್ರೀಮಂತ ಗೇಣಿದಾರರಲ್ಲಿ ಯಾರಾದರೂ ನಾವು ಒಟ್ಟಿಗೆ ಕಾಂಪನ್‌ಸೇಷನ್‌ನ್ನು ಕೊಡುತ್ತೇವೆ ಎಂದು ಮುಂದೆ ಬಂದರೆ ಅಂಥವರಿಗೂ ಅವಕಾಶ ಮಾಡಿಕೊಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಇನ್ನು ಎಲ್ಲಾ ಜಮೀನ್ದಾರರು ಒಬ್ಬರವರು ಅಲ್ಲ ಇಲ್ಲಿ ವಿದ್ಯಾವಂತರಲ್ಲಿ, ಅಂಥವರು ಮರೆತೋ ಇಲ್ಲವೇ ಮುಖ್ಯವಾಗಿದ್ದರಿಂದಲೋ ಅವರು ಮರೆತು ಡಿಕ್ಲರೇಷನ್ ಕೊಡದಿದ್ದರೆ ಅಂಥವರ ಮೇರೆ ಈ ರೀತಿ ಜೈಲು ಶಿಕ್ಷೆಯನ್ನು ವಿಧಿಸತಕ್ಕಂಥದ್ದು ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ. ಇಲ್ಲವೇ ಇಷ್ಟು ಸಾವಿರಾರು ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿರುವುದು ಅಷ್ಟೊಂದು ಸರಿಯಾದುದಲ್ಲವೆಂದು ನನ್ನ ಅಭಿಪ್ರಾಯ. ಆಕಸ್ಮಾತ್ ಅವರು ಏನಾದರೂ ತಪ್ಪು ಮಾಡಿದರೆ ಬೇರೆ ಇನ್ನು ಯಾವುದಾದರೂ ರೀತಿಯಲ್ಲಿ ಫೈನ್ ಹಾಕಿ ಅವರೆ ಈ ರೀತಿಯ ಸೀರಿಯಸ್ ಪನಿಶ್‌ಮೆಂಟ್ ಕೊಡುವುದು ಒಳ್ಳೆಯದಲ್ಲವೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಸಿ. ಸೆಟ್ಟರ್ (ಹಾನಗಲ್).— ಮಾನ್ಯ ಅಧ್ಯಕ್ಷರೇ, ಈಗ ತಂದಿರತಕ್ಕಂಥ ತಿದ್ದುಪಡಿಗಳನ್ನು ನಾನು ಸ್ವಾಗತ ಮಾಡುತ್ತಾ, ನಾನು ಎರಡು ನಿಮಿಷಗಳಲ್ಲಿ ನನ್ನ ಸೂಚನೆಗಳನ್ನು ತಿಳಿಸಬಯಸುತ್ತೇನೆ. ಅದನ್ನು ಮಾನ್ಯ ಮಂತ್ರಿಗಳವರು ಸಹ ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಳ್ಳುತ್ತೇನೆ.

ಈ ಲ್ಯಾಂಡ್ ರಿಫಾರಂಸ್ ಆಕ್ಟ್‌ನ ಫಾರಂ 11ನೇ ರೂಲ್‌ನ ಸೆಕ್ಷನ್ 66 ರ ರೀತ್ಯಾ ಡಿಕ್ಲರೇಷನ್ ಕೊಟ್ಟಂಥವುಗಳನ್ನು ತಹಶೀಲ್ದಾರ್‌ರವರು ಇತ್ಯರ್ಥ ಮಾಡುತ್ತಿದ್ದಾರೆ. ಅಲ್ಲಿ ಎರಡು ಪಾರ್ಟಿ ಇರುವುದಿಲ್ಲ, ಅಲ್ಲಿ ವಾದ ಪ್ರತಿ ವಾದ ಮಾಡಲು ಸಹ ಎರಡು ಪಾರ್ಟಿ ಇರುವುದಿಲ್ಲ. ಡಿಕ್ಲರೇಷನ್ ಕೊಟ್ಟಿರತಕ್ಕಂಥದ್ದು ಸರಪ್ಲಸ್ ಆಗದೆಯೋ ಇಲ್ಲವೋ ಎನ್ನುವುದನ್ನು ತಹಶೀಲ್ದಾರ್‌ರವರು ಒಬ್ಬರೇ ಪರಿಶೀಲನೆ ಮಾಡುತ್ತಾರೆ. ಅವರು ಅದನ್ನು ಸರಿಯಾಗಿ ಪರಿಶೀಲನೆಮಾಡುತ್ತಾರೋ ಇಲ್ಲವೋ ಎನ್ನುವಂಥಾದ್ದು ಸಂಶಯಾಸ್ಪದ. ಏತಕ್ಕೆಂದರೆ ಅವರಿಗೆ ಅಷ್ಟೊಂದು ಇಂಟ್ರೆಸ್ಟ್ ಇರುವುದಿಲ್ಲ. You know how bureaucracy is functioning. ನಾನು ಮಾನ್ಯ ಸುಬ್ಬಯ್ಯ ಶೆಟ್ಟಿಯವರನ್ನು ಮನವಿ ಮಾಡಿಕೊಂಡದ್ದೆ. ಅದುದರಿಂದ ತಾವು ಈ ಫಾರಂ ನಂ. 11 ಸೆಕ್ಷನ್ 66 ರನ್ನು ಪುನಃ ಪರಿಶೀಲನೆ ಮಾಡಿ ಸೇರಿಸಬೇಕು. ಏತಕ್ಕೆಂದರೆ ಅವರು ನ್ಯಾಯವನ್ನು ದೊರಕಿಸಿಕೊಟ್ಟಿದ್ದಾರೋ ಇಲ್ಲವೋ ಎಂದು ಹೇಳುವುದಕ್ಕೆ ಯಾವ ಇರುವುದಿಲ್ಲ. ಅಲ್ಲಿ ವಾದ ಪ್ರತಿವಾದ ಮಾಡಲು ಅವಕಾಶವೇ ಇಲ್ಲ. ಅಂದರೆ ಸೆಕ್ಷನ್ 66ರ ಕೆಳಗೆ ಬರತಕ್ಕಂಥ ಅರ್ಜಿಗಳನ್ನು ತೀರ್ಮಾನ ಮಾಡುವುದಕ್ಕೆ, ರೈತರನ್ನು ಉದ್ಧಾರ ಮಾಡಬೇಕು ಎನ್ನುವ ತತ್ವದಲ್ಲಿ ನಂಬಿಕೆ

ಇಟ್ಟು ಕೊಂಡು ಈ ಸಮಿತಿಯನ್ನು ಮಾಡಿದ್ದೇವೆ ನಾನು ಈ ಟ್ರಿಬ್ಯೂನಲ್‌ಗಳ ಮುಖಾಂತರ ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾಗಿದೆ. ಈಗ ನಾವು ಸರಿಯಾಗಿ ಎಷ್ಟು ಸರ್‌ಪ್ಲಸ್ ಲ್ಯಾಂಡ್ ಇವೆ ಎಂದು ರೆಕಗ್ನೈಜ್ ಮಾಡತಕ್ಕಂಥ ಕೆಲಸ ಮಾಡಬೇಕಾಗಿದೆ. ಈ ಕೆಲಸವನ್ನು ಸರಿಯಾಗಿ ಮಾಡಿದ್ದೆ ಭೂಮಿ ಇಲ್ಲದಂಥವರಿಗೆ ಭೂಮಿ ಹಂಚಲು ಭೂಮಿ ಸಿಗುತ್ತದೆ. ಆಗ ಭೂಮಿಯನ್ನು ಸರಿಯಾಗಿ ಹಂಚಿಕೆ ಮಾಡಬಹುದು. ಆ ರೀತಿಯಾಗಿ ಸರಿಯಾದ ಕ್ರಮದಲ್ಲಿ ಮಾಡದಿದ್ದರೆ ನಾವು ಈಗ ಏನು 20 ಆದೇಶಗಳ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಭೂಮಿ ಇಲ್ಲದವರಿಗೆ ಭೂಮಿಯನ್ನು ಹಂಚುತ್ತೇವೆಂದು ಘೋಷಣೆ ಮಾಡಿದ್ದೇವೋ ಅದನ್ನು ಮಾಡಲು ಆಗುವುದಿಲ್ಲ. ಆದುದರಿಂದ ಈಗ ಏನು 40,30-25 ಎಕರೆ ಇದ್ದಂಥವರು ಡಿಕ್ಲರೇಷನ್ ಕೊಟ್ಟಿದ್ದಾರೆ, ಆ ರೀತಿ ಡಿಕ್ಲರೇಷನ್ ಕೊಟ್ಟಿರತಕ್ಕಂಥವರಲ್ಲಿ 10 ಎಕರೆ ಇರತಕ್ಕಂಥವರು 13-15 ಎಕರೆವರೆಗೂ ಹೋಗಿರುತ್ತಾರೆ, ಇನ್ನು 20-25,30 ಎಕರೆ ಎಂದು ಕೊಟ್ಟಿರ ತಕ್ಕಂಥವರೂ ಸಹ 30 35.55 ಎಕರೆವರೆಗೂ ಅವರ ಜಮೀನು ಹೋಗಿರುತ್ತದೆ, so it requires a scrutiny and that scrutiny must have to be done cautiously. ಆದುದರಿಂದ ನಾನು ಹೇಳುವುದೇ ನೆಂದರೆ ತಹಶೀಲ್ದಾರರವರು ಮಾಡಿರತಕ್ಕಂಥ ಕೆಲಸ ಸರಿಯಾಗಿದೆಯೋ ಇಲ್ಲವೋ ಎಂದು ಪರಿಶೀಲನೆ ಮಾಡತಕ್ಕಂಥವರು ಯಾರು ? ಅದಕ್ಕೋಸ್ಕರವೇ ಅವರ ಜೋತೆಯಲ್ಲಿ ನಾನ್ ಅಫಿಶಿಯಲ್ ಮೆಂಬರ್‌ನ್ನೂ ನೇಮಿಸಿ ಎಂದು ಕೇಳುತ್ತಿದ್ದೇವೆ ಮೊದಲು ಸರ್‌ಪ್ಲಸ್ ಲ್ಯಾಂಡ್ ಎಷ್ಟಿದೆ ಎಂದು ಗುರುತಿನುವ ಕಾರ್ಯದ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕು ಇಲ್ಲದಿದ್ದರೆ ತಮ್ಮ ಉದ್ದೇಶ ಸಫಲವಾಗುವುದಿಲ್ಲ ಎನ್ನುವ ಮಾತನ್ನು ಹೇಳಿ ಇಷ್ಟು ವಾತ ವಾದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ—ಜೈ ಹಿಂದ್—

MR. DEPUTY SPEAKER.—The Hon'ble Minister for Revenue will reply tomorrow. The House will now adjourn and meet tomorrow at 1.00 p.m.

The House adjourned at twenty minutes past six of the clock to meet again at one of the Clock on Wednesday, the 18th February 1976.